ಅ) ಅವರಲ್ಲಿ ಶಾಲೆಗೆ ದಾಖಲಾತಿ ಹೊಂದಿದವರ ಸಂಖ್ಯೆ ?

ಇ) ಈ ಅವಧಿಯಲ್ಲಿ ಶಾಲೆಯನ್ನು ಬಿಟ್ಟವರ ಸಂಖ್ಯೆ, ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರ ವರ್ಗಗಳಿಗೆ ಸೇರಿದವರ ಸಂಖ್ಯೆ ?

ಈ) ಶಾಲೆಯನ್ನು ಬಿಡಲು ಕಾರಣ ?

ಉ) ಶಾಲೆಗಳನ್ನು ಬಿಡದಿರಲು ಒದಗಿಸುವ ಪ್ರೋತ್ಸಾಹಗಳು ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—(ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ)	ವರ್ಷ	ಗಣತಿಗೊಳಪಟ್ಟವರ ಸಂಖ್ಯೆ	ಗಣತಿಗೆ ಒಳಪಟ್ಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು.
	೧೯೮೨	೩೩,೫೦,೦೦೯	೬,೦೬,೪೮೪
	೧೯೮೩	೩೪,೧೬,೮೨೬	೬,೩೮,೧೦೬
	೧೯೮೪	೩೪,೭೨,೯೨೨	೬,೪೮,೪೭೮
ಆ)	೧೯೮೨	೩೨,೧೯,೧೨೪	೫,೭೨,೦೨೩
	೧೯೮೩	೩೨,೭೪,೦೮೭	೫,೯೩,೬೭೭
	೧೯೮೪	೩೨,೭೭,೨೫೭	೫,೯೩,೯೩೬

ಇ) ಈ ಮಾಹಿತಿ ಸಿಗುವುದಿಲ್ಲವಾದ್ದರಿಂದ ಸಂಗ್ರಹಿಸಲಾಗಿಲ್ಲ.

ಈ) ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪೋಷಕರ ಆರ್ಥಿಕ ಪರಿಸ್ಥಿತಿಯು ಈ ಶಾಲೆಗಳನ್ನು ಬಿಡುವುದಕ್ಕೆ ಮುಖ್ಯ ಕಾರಣ.

ಉ) ಶಾಲೆಯನ್ನು ಬಿಡದಿರಲು ಉಚಿತ ಪುಸ್ತಕಗಳ ವಿತರಣೆ, ಹೆಣ್ಣುಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ವಿದ್ಯಾರ್ಥಿವೇತನ ಯೋಜನೆಯು ಜಾರಿಯಲ್ಲಿದೆ. (ಉಚಿತ ಸಮವಸ್ತ್ರವನ್ನು ೧ ಮತ್ತು ೨ನೇ ತರಗತಿಯ ಮಕ್ಕಳಿಗೆ ಹಾಗೂ ೩ ರಿಂದ ೭ನೇ ತರಗತಿಯಲ್ಲಿನ ಪರಿಶಿಷ್ಟ ಜಾತಿ/ಪಂಗಡಗಳ ಹೆಣ್ಣು ಮಕ್ಕಳಿಗೆ ನೀಡಲಾಗುತ್ತದೆ.

ಗಮನ ಸೆಳೆಯುವ ಸೂಚನೆ

೧. ಉಡುಪಿ ತಾಲ್ಲೂಕು ಕೋಟ ಆರಕ್ಷಕ ಠಾಣೆಯ ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ೨೨ ಲಕ್ಷ ರೂಪಾಯಿ ಮೌಲ್ಯದ ಕಳ್ಳ ಸಾಗಾಣಿಕೆ ಸರಕುಗಳನ್ನು ಹಿಡಿದ ನಂತರ ಉಡುಪಿ ತಾಲ್ಲೂಕಿನ ಕೋಟ ಆರಕ್ಷಕ ಠಾಣೆಯ ಆರಕ್ಷಕ ಉಪ ನಿರೀಕ್ಷಕರನ್ನು ಏಕಾಏಕಿ ವರ್ಗಾವಣೆ ಮಾಡಿದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀ ಅಲ್ಲಮಪ್ರಭು ಸುಬೇದಾರ್‌ರವರು ೮.೯.೮೫ರಿಂದ ದಕ್ಷಿಣ ಕನ್ನಡ ಜಿಲ್ಲೆಯ ಕೋಟಾ ಆರಕ್ಷಕ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ೮.೯.೮೫ರಂದು ಅವರನ್ನು ಪಶ್ಚಿಮ ವಲಯದ ಬೇರೆ ಯಾವುದಾದರೂ ಒಂದು ಆರಕ್ಷಕ ಠಾಣೆಗೆ ವರ್ಗಾಯಿಸಬೇಕೆಂದು ಪಶ್ಚಿಮ ವಲಯದ ಡಿ.ಐ.ಜಿ. ಯವರಿಗೆ ಆದೇಶ ನೀಡಲಾಯಿತು. ವರ್ಗಾವಣೆ ಮೇಲೆ ಶ್ರೀ ಅಲ್ಲಮಪ್ರಭು ಸುಬೇದಾರ್‌ರವರು ೧೦.೯.೮೫ರಂದು ಉತ್ತರ ಕನ್ನಡ ಜಿಲ್ಲೆಗೆ ಹೋಗಿ ಅಲ್ಲಿಯ ಜಿಲ್ಲಾ ಪೋಲೀಸ್ ಅಧಿಕಾರಿಗಳ ಮುಂದೆ ಹಾಜರಾದರು. ಅಲ್ಲಿಯ ಜಿಲ್ಲಾ ಪೋಲೀಸ್ ಅಧಿಕಾರಿಗಳು ಅವರನ್ನು ಉತ್ತರ ಕನ್ನಡ ಜಿಲ್ಲೆಯ ಚಿತ್ತಕುಲ ಆರಕ್ಷಕ ಠಾಣೆಯ ಸಬ್‌ಇನ್ಸ್‌ಪೆಕ್ಟರಾಗಿ ನೇಮಿಸಿದರು. ಅವರು ಆಗಿನಿಂದಲೂ ಅಲ್ಲಿಯೇ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.

೨. ಇದೇ ವರ್ಷ ಮೇ ತಿಂಗಳು ೬ನೇ ತಾರೀಖು ರಾತ್ರಿ ನಿಷಿದ್ಧ ವಸ್ತುಗಳ ಕಳ್ಳಸಾಗಾಣಿಕೆ ನಡೆಯುತ್ತಿದೆ ಎಂಬ ನಂಬುಗರ್ಹವಾದ ವರ್ತಮಾನದ ಮೇಲೆ ಶ್ರೀ ಅಲ್ಲಮಪ್ರಭು ಸುಬೇದಾರ್‌ರವರು ಪಡುಕೆರೆ ಹತ್ತಿರವಿರುವ ಮಣ್ಣೂರು ಗ್ರಾಮಕ್ಕೆ ಹೋಗಿ ದೋಣಿಯಿಂದ ತರಲಾಗಿತ್ತೆಂದು ಹೇಳಲಾದ ನಿಷಿದ್ಧ ವಸ್ತುಗಳನ್ನು ಜಪ್ತಿ ಮಾಡಿದರು. ಈ ವಸ್ತುಗಳ ಸಾಗಾಣಿಕೆಗಾಗಿ ಉಪಯೋಗಿಸುತ್ತಿದ್ದ ಲಾರಿಯನ್ನು ಪಶಪಡಿಸಿಕೊಳ್ಳಲಾಯಿತು. ಮತ್ತು ಲಾರಿಯ ಚಾಲಕನನ್ನು ದಸ್ತಗಿರಿ ಮಾಡಲಾಯಿತು. ಹೀಗೆ ಜಪ್ತಿ ಮಾಡಿದ ವಸ್ತುಗಳ ಬೆಲೆ ೧೮ ಲಕ್ಷಕ್ಕೂ ಹೆಚ್ಚು ರೂಪಾಯಿಗಳೆಂದು ಅಂದಾಜು ಮಾಡ ಲಾಗಿದೆ. ಇದು ಕಸ್ಟಮ್ಸ್ ಕಾಯಿದೆಯನ್ನು ಉಲ್ಲಂಘಿಸಿದ ಅಪರಾಧವಾದ್ದರಿಂದ ಜಪ್ತಿ ಮಾಡಿದ ವಸ್ತುಗಳು ಹಾಗೂ ದಸ್ತಗಿರಿ ಮಾಡಲಾದ ಆಪರಾಧಿಯನ್ನು ಕಸ್ಟಮ್ಸ್ ಇಲಾಖೆಯ ಅಧಿಕಾರಿಗಳ ವಶಕ್ಕೆ ಒಪ್ಪಿಸಲಾಯಿತು.

೩. ಈ ಮೊಕ್ಕದ್ದಮೆ ಕಸ್ಟಮ್ಸ್ ಇಲಾಖೆಗೆ ವರ್ಗಾವಣೆಯಾಗಿರುವುದರಿಂದ ಪೋಲೀಸರು ಈ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಾಗುವುದಿಲ್ಲ. ಇವರ ವರ್ಗಾವಣೆಯು ಹಿಂದೆ ಯಾವುದೇ ಪ್ರಭಾವಶಾಲಿ ವ್ಯಕ್ತಿಗಳ ಕೈವಾಡ ಇದೆ ಎಂಬ ಸಂದೇಹ ನಿರಾಧಾರವಾದುದು. ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆಗೂ ಮತ್ತು ಅವರು ಕಳ್ಳ ಸಾಗಾಣಿಕೆ ವಸ್ತುಗಳನ್ನು ಹಿಡಿದಿದ್ದಕ್ಕೂ ಯಾವ ಸಂಬಂಧವೂ ಇಲ್ಲ. ಶ್ರೀ ಅಲ್ಲಮಪ್ರಭು ಸುಬೇದಾರ್ ಅವರ ವರ್ಗಾವಣೆಗೆ ಏಕಮಾತ್ರ ಕಾರಣ ಸಾರ್ವಜನಿಕ ಹಿತದೃಷ್ಟಿಯೇ.

12-00 Noon

ಶ್ರೀ ಎಂ. ವೀರಪ್ಪಮೊಯ್ಲಿ.—ಅಧ್ಯಕ್ಷರೇ ಇದರಲ್ಲಿ ಕೆಲವು ವಿಚಾರಗಳು ಅಡಕವಾಗಿವೆ. ಒಂದನೆಯದಾಗಿ, ಸ್ಮಗಲಿಂಗ್ ಗೂಡ್ಸ್‌ನ್ನು ಹಿಡಿದದ್ದು ಯಾವಾಗ ? ಮತ್ತು ಅವರು ಕೆಲವರನ್ನು ಅರೆಸ್ಟ್ ಮಾಡಿದ ಕೂಡಲೇ, ಈ ವರ್ಗಾವಣೆಯ ಹುಕುಂ ಬೆಂಗಳೂರಿನಿಂದಲೇ ಬಂದಿದೆ. ಸಾಮಾನ್ಯವಾಗಿ ವರ್ಗಾವಣೆ ಮಾಡತಕ್ಕವರು ಅಲ್ಲಿನ ಡಿ.ಐ.ಜಿ. ಯವರು. ಬೆಂಗಳೂರಿನಿಂದ ಡಿ.ಜಿ.ಪಿ. ಯವರು ವರ್ಗಾವಣೆ ಏಕೆ ಮಾಡುವುದಕ್ಕೆ ಹೋಗಬೇಕು ಮತ್ತು ಟೆಲಿಕ್ಸ್‌ನಲ್ಲಿ ಟ್ರಾನ್ಸ್‌ಫರ್ ಮೇಸೇಜ್ ಕಳುಹಿಸುವ ಕಾರಣ ಏನು ? ಇನ್ನೊಂದು ವಿಚಾರ ಏನೆಂದರೆ, ಆ ಇನ್ಸ್‌ಪೆಕ್ಟರ್‌ರವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆಯೆಂದು ಹೇಳಿದ್ದಾರೆ. ದಿನಾಂಕ ೮-೧೦-೮೩ರಲ್ಲಿ ಅಲ್ಲಿಗೆ ಅಂದರೆ ಕೋಟಾ ಪೋಲೀಸ್ ಸ್ಟೇಷನಿಗೆ ಈ ಸಬ್ ಇನ್ಸ್‌ಪೆಕ್ಟರ್‌ರವರನ್ನು ಹಾಕಿದ್ದಾರೆ ಅಂದರೆ ಎರಡು ವರ್ಷ ಕೂಡ ಇನ್ನೂ ಪೂರ್ತಿ ಆಗಲಿಲ್ಲ. ಇದು ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಆಗುತ್ತದೆ. ಪ್ರಿಮೆಚ್ಯೂರ್ ಟ್ರಾನ್ಸ್‌ಫರ್‌ನ್ನು ಯಾವ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿದ್ದಾರೆ ? ಮತ್ತೊಂದು ವಿಚಾರ ಏನೆಂದರೆ, ಈ ಸಬ್ ಇನ್ಸ್‌ಪೆಕ್ಟರ್‌ರವರು ಹರಿಜನ ಮತ್ತು ಗಿರಿಜನರ ಮೇಲೆ ಅಟ್ರಾಸಿಟಿ ಮಾಡುತ್ತಿದ್ದ ಒಬ್ಬ ಪ್ರಭಾವಿ ವ್ಯಕ್ತಿಯ ಮೇಲೆ ೨-೩ ಸಾರಿ ಕೇಸ್ ಹಾಕಿ ಹಿಡಿದಿದ್ದಾರೆ. ಹರಿಜನರ ಮೇಲೆ ಅಟ್ರಾಸಿಟಿ ಮಾಡಿದವರನ್ನು ಹಿಡಿದ ಮೇಲೆ ಅದು ಕೂಡ ಇವರ ಟ್ರಾನ್ಸ್‌ಫರ್‌ಗೆ ಪೂರಕ ಕಾರಣವಾಗಿದೆ. ಹರಿಜನರ ಮೇಲೆ ಅಟ್ರಾಸಿಟಿ ಮಾಡಿರುವ ಬಗ್ಗೆ ಇಲ್ಲಿ ಯಾವ ಹೇಳಿಕೆಯೂ ಇಲ್ಲ. ಆದರ ವಿವರವನ್ನು ಇಲ್ಲಿ ಕೊಟ್ಟಿಲ್ಲ. ನಾವು ಗಮನ ಸೆಳೆಯುವುಕ್ಕೆ ಈ ಎರಡು ಘಟನೆಗಳನ್ನು ಕೊಟ್ಟಿದ್ದೇವೆ. ಈ ಇನ್ಸ್‌ಪೆಕ್ಟರ್‌ರವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ತಮ್ಮ ಪ್ರಾಣವನ್ನೇ ಲೆಕ್ಕಿಸದೇ ಹಾಗೂ ತನ್ನ ಜೀವವನ್ನು ತೊಂದರೆಗೆ ಸಿಲುಕಿಸಿಕೊಂಡು ಆವರನ್ನು ಹಿಡಿದಿದ್ದಾರೆ. ಪುಣ್ಯಕ್ಕೆ ಅವರ ಪ್ರಾಣ ಉಳಿದಿದೆ. ಇವರು ಹಿಡಿದಿರುವ ಸ್ಮಗ್ಲರ್‌ಗಳು ಬಹಳ ದೊಡ್ಡವರು. ಇವರು ಸ್ಮಗಲಿಂಗ್ ಮಾಡುತ್ತಿದ್ದ ಗೂಡ್ಸ್ ಬೆಲೆ ಸುಮಾರು ೧೮ ಲಕ್ಷ ಎಂದು ಅಂದಾಜು ಮಾಡಿದ್ದಾರೆ, ಇದು ೨೨ ಲಕ್ಷ ರೂಪಾಯಿಗಳಿಗೂ ಹೆಚ್ಚು ಇದೆ ಎಂಬುದು ನಮಗೆ ಗೊತ್ತು. ಈ ಘಟನೆಯಲ್ಲಿ ಸಬ್ ಇನ್ಸ್‌ಪೆಕ್ಟರ್‌ರವರ ಪ್ರಾಣವೇ ಹೋಗುತ್ತಿತ್ತು. ಆದರೂ ಪ್ರಾಣದ ಹಂಗನ್ನು ತೊರೆದು ಅದನ್ನೆಲ್ಲಾ ಮಾಡಿದರೆ, ಇವರು ಬೆಂಗಳೂರಿನಿಂದ ಟೆಲಿಕ್ಸ್ ಮುಖಾಂತರ ವರ್ಗಾವಣೆ ಮಾಡಿದ್ದಾರೆ. ಇದರಿಂದ ಸರ್ಕಾರದ ಪ್ರಾಮಾಣಿಕತೆ ಎಲ್ಲಿ ಉಳಿಯುತ್ತದೆ ? ಅಧಿಕಾರಿಗಳು ಪ್ರಾಮಾಣಿಕವಾಗಿ, ಸ್ಥೈರ್ಯದಿಂದ ಕೆಲಸ ಮಾಡುವುದು ಹೇಗೆ ? ಇದರ ಬಗ್ಗೆ ನಾವು ಆಕ್ಷೇಪಣೆ ಮಾಡಬೇಕಾಗುತ್ತದೆ, ಇದರಲ್ಲಿ ಯಾರದೋ ಕೈವಾಡ ಇದೆ. ಆದ್ದರಿಂದಲೇ ಅವರನ್ನು ವರ್ಗಾವಣೆ ತಾವು ಮಾಡಿದ್ದೀರಿ ಎಂದು ಆ ನಿರ್ಣಯಕ್ಕೆ ನಾವು ಬರಬೇಕಾಗುತ್ತದೆ, ಆದುದರಿಂದ ತಾವು ಅದನ್ನು ನಿವಾರಣೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಈ ಸಬ್‌ಇನ್ಸ್‌ಪೆಕ್ಟರ್‌ರವರು, ಒಂದು ಉತ್ತಮವಾಗಿರತಕ್ಕಂತಹ ಕಾರ್ಯವನ್ನು ಮಾಡಿದ್ದಾರೆ ನಿಜ, ಆದರೆ ಅದನ್ನು ಹಿಡಿದ ಮೇಲೆ ಸಂಬಂಧಪಟ್ಟವರನ್ನು ಅರೆಸ್ಟ್

ಮಾಡಲಿಲ್ಲ ಮತ್ತು ಅವರ ಮೇಲೆ ಕೇಸನ್ನೂ ಹಾಕಲಿಲ್ಲ, ಲಾರಿಯನ್ನು ಸೀಸ್ ಮಾಡಲಿಲ್ಲವೆಂದು ನಮಗೆ ವರದಿ ಬಂತು. ಅದಕೋಸ್ಕರ ಇವರು ಇಷ್ಟೆಲ್ಲಾ ಹಿಡಿದು ಅವರನ್ನು ಬಿಟ್ಟು ಬಿಟ್ಟರಲ್ಲ ಎಂದು ಪರ್ತಮಾನ ಬಂದಿದ್ದರಿಂದ ಅವರನ್ನು ಶಿಫ್ಟ್ ಮಾಡಬೇಕಾಗಿ ಬಂತು. ಆದರೆ ರಿಪೋರ್ಟ್ ತರಿಸಿದ ಮೇಲೆ ಅವರು ಹೇಳಿದರು, ಅದು ನಮಗೆ ಸೇರಲಿಲ್ಲ, ಆದ್ದರಿಂದ ಅದನ್ನು ಕಸ್ಟಮ್ಸ್‌ಗೆ ಕೊಟ್ಟಿದ್ದೇವೆಂದು ಹೇಳಿದರು, ಅದಕೋಸ್ಕರ ಅವರನ್ನು ಪರ್ಗಾವಣೆ ಮಾಡಿದ್ದೇವೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಈಗ ತಾನೇ ಗೃಹ ಸಚಿವರು ಹೇಳಿದಂತಹ ಹೇಳಿಕೆ ಸತ್ಯಕ್ಕೆ ದೂರವಾಗಿರತಕ್ಕಂತಾದ್ದು. ಏಕೆಂದರೆ ಈ ಕಳ್ಳಸಾಗಣೆ ವಸ್ತುಗಳನ್ನು ಸಬ್‌ಇನ್ಸ್‌ಪೆಕ್ಟರ್ ಆದ ಅಲ್ಲಮ ಪ್ರಭು ಸುಭೇದಾರ್‌ರವರು ಹಿಡಿದ ಮೇಲೆ ಕಳ್ಳ ಮಾಲನ್ನು ಹಿಡಿದಿರುವ ಬಗ್ಗೆ ಗೃಹ ಸಚಿವರೇ ಅಭಿಮಾನ ಸೂಚಿಸಿದ್ದಾರೆ, ಅದು ಪತ್ರಿಕೆಗಳಲ್ಲಿ ಬಂದಿತ್ತು, ಅದನ್ನು ನಾನೂ ನೋಡಿದ್ದೇನೆ. ಅದರೊಂದಿಗೆ ಪಶ್ಚಿಮ ಭಾಗದ ಡಿ.ಐ.ಜಿ. ಯವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಅದೇ ತರಹ ಕೋಟಾದ ನಾಗರೀಕರೂ ಸಹ ಕಳ್ಳ ಸಾಗಾಣೆ ವಸ್ತುಗಳನ್ನು ಹಿಡಿದಂತಹ ಪ್ರಸಂಗವನ್ನು ಮತ್ತು ಅದಕ್ಕೆ ಅವರನ್ನು ಪ್ರಶಂಸಿಸಿದ್ದಾರೆ. ಅದೇ ಸಂದರ್ಭದಲ್ಲಿ ಗೃಹ ಸಚಿವರ ಹೇಳಿಕೆಯಲ್ಲಿ ತಿಳಿಸಿದಂತೆ ಲಾರಿಯನ್ನು ಸೀಸ್ ಮಾಡಲಿಲ್ಲವೆಂದು ಹೇಳಿದ್ದಾರೆ. ಆದರೆ ಲಾರಿಯನ್ನು ಸೀಸ್ ಮಾಡಿದ್ದನ್ನು ನಾವು ಕಣ್ಣಾರೆ ನೋಡಿರುವಾಗ ತಮ್ಮ ಹೇಳಿಕೆಯಿಂದ ಎಷ್ಟು ಸತ್ಯ ಕಂಡು ಬರುತ್ತದೆ ಎನ್ನುವ ಪ್ರಶ್ನೆಯನ್ನು ತಮ್ಮ ಮುಂದಿಡುತ್ತಿದ್ದೇನೆ. ಇದರ ಹಿಂದೆ ರಾಜಕೀಯ ಕೈವಾಡ ಇದೆ. ಅದರಲ್ಲಿಯೂ ನಾಲ್ಕು ಕ್ರಿಮಿನಲ್ ಪ್ರಕರಣದಲ್ಲಿ ಬೇಕಾಗಿದ್ದಂತಹ ವ್ಯಕ್ತಿಯನ್ನು ಬಂಧಿಸಿದ ಒಂದೇ ಒಂದು ಉದ್ದೇಶದಿಂದ ತಾವು ವೈರ್‌ಲೆಸ್ ಮುಖಾಂತರ ಪರ್ಗಾವಣೆ ಮಾಡಿದ್ದೀರಿ. ಈಗ ತಾನೇ ಉದಯವಾಣಿ ಪತ್ರಿಕೆಯಲ್ಲಿ, ಸಬ್ ಇನ್ಸ್‌ಪೆಕ್ಟರ್ ಅಲ್ಲಮ ಪ್ರಭು ಸುಭೇದಾರ್‌ರವರನ್ನು ದಿಢೀರನೆ ಬೆಂಗಳೂರಿನಿಂದ ವೈರ್‌ಲೆಸ್ ಮುಖಾಂತರ ಯಾವುದೇ ಸಾಮಾನ್ಯವಾಗಿ ನೀಡುವ ಅವಧಿಯನ್ನು ಕೊಡದೆ ತಕ್ಷಣ ತನ್ನ ಹುದ್ದೆಯನ್ನು ಬಿಟ್ಟು ಕೊಟ್ಟು ಕಾರವಾರಕ್ಕೆ ಹೋಗಬೇಕೆಂದು ತುರ್ತು ಆಜ್ಞೆ ಬಂದಿರುತ್ತದೆ ಎಂದು ಪ್ರಕಟವಾಗಿತ್ತು. ಇವರು ಯಾವುದೇ ವಿಳಂಬ ಮಾಡದೆ ಕೆಲಸವನ್ನು ಬಿಟ್ಟು ಕೊಟ್ಟು ಕಾರವಾರಕ್ಕೆ ನೇರವಾಗಿ ಹೋಗಬೇಕೆಂದು ತಿಳಿದು ಬಂದಿದೆ ಇವಕ್ಕೆಲ್ಲಾ ತಾವು ಸ್ಪಷ್ಟೀಕರಣ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಚಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ನಾನು ಮೊದಲೇ ಹೇಳಿದ್ದೇನೆ. ಅವರು ಹಿಡಿದದ್ದಕ್ಕೆ ನನ್ನ ಪ್ರಶಂಸೆಯೂ ಉಂಟು. ಆದರೆ ಅದನ್ನು ಹಿಡಿದ ಮೇಲೆ ತಕ್ಷಣ ಕೇಸ್ ಹಾಕದೆ ವಿಳಂಬ ಮಾಡಿರುತ್ತಾರೆ ಸಂಬಂಧಪಟ್ಟವರನ್ನು ಹಿಡಿದ ಮೇಲೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡರು ಎನ್ನುವ ಮಾಹಿತಿ ನಮಗೆ ಬರಲಿಲ್ಲ. ಎಸ್.ಎಸ್.ಬಿ. ಇನ್‌ಫರ್‌ಮೇಷನ್ ಪ್ರಕಾರ ಹಿಡಿದುಕೊಂಡವರ ಮೇಲೆ ಕೇಸ್ ಹಾಕಬೇಕಾಗುತ್ತದೆ. ಅದನ್ನು ಅವರು ಮಾಡಲಿಲ್ಲ, ವಿಳಂಬ ಮಾಡಿದ್ದಾರೆ ಅದಕೋಸ್ಕರ ಅವರನ್ನು ಪರ್ಗಾವಣೆ ಮಾಡಿದ್ದೇವೆ.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೆ ನ್ಯಾಯವಾಗಿ ಕೆಲಸ ಮಾಡಿದಾಗ ಯಾವ ರೀತಿ ಪ್ರೋತ್ಸಾಹ ಸಿಗುತ್ತದೆ ಎನ್ನುವುದಕ್ಕೆ ಇದೊಂದು ನಿದರ್ಶನ. ಒಬ್ಬ ಪೋಲೀಸ್ ಅಧಿಕಾರಿ ದೊಡ್ಡ ಮೊತ್ತದ ಕಳ್ಳಸಾಗಾಣಿಕೆ ವಸ್ತುಗಳನ್ನು ಹಿಡಿದಾಗ ಅವನಿಗೆ ಅವರುಗಳ ಮೇಲೆ ಕೇಸ್ ಹಾಕಲು ಸರಿಯಾದ ಮಾರ್ಗದರ್ಶನ ಕೊಡಬೇಕಾಗಿತ್ತು. ಆದರೆ ಆ ರೀತಿ ನೀವು ಮಾಡಲಿಲ್ಲ. ಕಸ್ಟಮ್ಸ್ ಇಲಾಖೆಯ ಕಡೆಯಿಂದ ಈ ಕೆಲಸ ನಮ್ಮದು ಎಂದು ಕೈಗೆ ತೆಗೆದುಕೊಂಡು ಯಾವ ಕಸ್ಟಂಸ್ ಅಧಿಕಾರಿ ಇದರಲ್ಲಿ ಶಾಮೀಲಾಗಿದ್ದಾರೋ ಅವರು ಇದನ್ನು ನಾವೇ ಹಿಡಿದೆವು ಎಂದು ಹೇಳಿ ವರದಿಯನ್ನು ತಯಾರು ಮಾಡಿ ಇವತ್ತು ತಪ್ಪಿಗೆ ಬಡ್ತಿ ಸಿಗುವ ಹಾಗೆ ಮಾಡಿದ್ದಾರೆ. ಧೈರ್ಯವಾಗಿ ಏಕಾ ಏಕಿಯಾಗಿ ಅಲ್ಲಮಪ್ರಭು ಸುಭೇದಾರ್‌ರವರು ಕಳ್ಳ ಸಾಗಾಣಿದಾರರನ್ನು ಹಿಡಿದಾಗ ಅವರಿಗೆ ಸಿಕ್ಕ ಬಡ್ತಿ ಏನು ? ೨೪ ಗಂಟೆಯೊಳಗಾಗಿ ಕಾರವಾರಕ್ಕೆ ಹೋಗಬೇಕು ಎನ್ನುವ ವರ್ಗಾವಣೆ ಆರ್ಡರ್ ಅವರಿಗೆ ಬಂದಿದೆ. ''ಕಳಬೇಡ ಕೊಲಬೇಡ'' ಎಂದು ಬಸವಣ್ಣನವರ ವಚನ ಇದೆ. ಅದೇ ಅಂತರಂಗ ಶುದ್ಧಿ ಎಂದು ಹೇಳಿದ್ದಾರೆ. ಅಲ್ಲಮಪ್ರಭು ಅವರಿಗೆ ಆದ ಅನ್ಯಾಯವನ್ನು ನಾವು ಅತ್ಯಂತ ವಿಷಾದದಿಂದ ನೋಡಬೇಕಾಗಿದೆ. ನನ್ನ ಮಿತ್ರರಾದ ಪ್ರತಾಪಚಂದ್ರ ಶೆಟ್ಟಿಯವರು ಹೇಳಿದ ಹಾಗೆ ಈ ಪ್ರಕರಣ ಮಾತ್ರವಲ್ಲ ಇನ್ನೊಂದು ಪ್ರಕರಣ ಇದೆ. ಪೋಲೀಸ್‌ನವರಿಗೆ ಬೇಕಾಗಿದ್ದ ಒಬ್ಬ ವ್ಯಕ್ತಿ, ಒಂದು ರಾಜಕೀಯ ಪಕ್ಷಕ್ಕೆ ಬೆಂಬಲ ಕೊಡುತ್ತಾನೆ ಎನ್ನುವ ಕಾರಣದಿಂದ ಅವನನ್ನು ರಕ್ಷಣೆ

ಮಾಡಲು ಈ ಕೆಲಸ ನಡೆದಿದೆ. ಅವರನ್ನು ಅಲ್ಲಮಪ್ರಭುರವರು ಬಂದಿಸುತ್ತಿದ್ದರಿಂದ ಅವರನ್ನು ವರ್ಗಾವಣೆ ಮಾಡಲಾಗಿದೆ. ಇದೇ ರೀತಿ ಕುಂದಾಪುರದಲ್ಲಿ ನಡೆದಂತಹ ಅಣ್ಣಾಕಾರ್ಮಿಯವರ ಪ್ರಕರಣದಲ್ಲಿ ಇನ್ಸ್‌ಪೆಕ್ಟರ್‌ರವರ ವರ್ಗಾವಣೆಯಾಯಿತು. ಕುಂದಾಪುರದ ಪೋಲೀಸ್ ಇಲಾಖೆಗೆ ಒಳ್ಳೆಯ ಹೆಸರನ್ನು ತಂದು ಕೊಟ್ಟಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಆದ ಮ್ಯಾಗೇರಿಯವರನ್ನೂ ಒಂದು ವಾರದಲ್ಲಿ ವರ್ಗ ಮಾಡಿದರು.

ಶ್ರೀ ಜಿ. ಎಸ್. ಆಚಾರ್.—ಇಂತಹ ಒಂದು ಪ್ರಕರಣ ಇವೊತ್ತು ನಡೆಯುತ್ತಾ ಇದೆ. ಅದೇ ರೀತಿ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರ ವರ್ಗಾವಣೆ ಕೂಡಾ ಆಯಿತು. ಇದು ಬಹಳ ಅನ್ಯಾಯ ಸ್ವಾಮಿ, ಅದನ್ನು ತಮ್ಮ ಅವಗಾಹನೆಗೆ ತರುತ್ತಾ ಇದ್ದೇನೆ.

ಶ್ರೀ ಬಿ. ರಾಚಪ್ಪ.—ಕಳ್ಳ ಸಾಗಾಣಿಕೆಯ ವಸ್ತುಗಳು ಕಸ್ಟಮ್ಸ್‌ನವರಿಗೆ ಸೇರಿದುದು, ಅದಕ್ಕೊಸ್ಕರ ಬಿಟ್ಟು ಬಿಟ್ಟು ಬಂದೆ ಎಂದು ಹೇಳಿದ್ದಾರಲ್ಲ, ಆ ವಿಷಯವಾಗಿ ನಮಗೆ ಅನುಮಾನ ಅವರ ಮೇಲೆ ಬರುವುದು. ಆ ವಸ್ತುಗಳನ್ನು ಹಿಡಿದ ಮೇಲೆ ಅವುಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು ಅವರ ಮೇಲೆ ಕೇಸ್ ಹಾಕಬೇಕಾಗಿತ್ತು. ಈಗ ಅವರು ಹೇಳಿದ ಹಾಗೆ, ವಸ್ತುಗಳನ್ನು ನಾವು ಹಿಡಿದಿದ್ದೇವೆ ಎಂದು ಹೇಳಿ ಮೇಲು-ಮಾತು ಮಾಡಿಕೊಂಡು ಬಹುಮಾನ ತೆಗೆದು ಕೊಳ್ಳಲಿಕ್ಕೆ ಕಸ್ಟಮ್ಸ್‌ನವರು ಹೊರಟಿರುವ ಆ ಕೆಲಸಕ್ಕೆ ಇವರು ಸಹಾಯಕರಾದರು. ಹಿಡಿದ ಮೇಲೆ ಸಂಬಂಧಪಟ್ಟವರ ಮೇಲೆ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು. ಅದಕ್ಕೊಸ್ಕರವಾಗಿ ಅವರನ್ನು ವರ್ಗಾವಣೆ ಮಾಡಿ ಎಂದು ಹೇಳಿದ್ದು.

SRI BLASIUS M. D'SOUZA.—Mr. Speaker Sir, I have nothing more to add to what the hon- Members Sri Pratapchandra Shetty and Sri M. Veerappa Moily have said. I would only like to submit to the Hon. Minister for Home that in this way, if he treats the Police Officer, the Congress(I) will not get justice and also the people who are suffering from the Janata Party will not get justice. Sir, a good officer has been transferred because there is some involvement of the Janata Party members. Earlier also, it has come to our notice that the Hon. Minister has taken action on an officer who has been marked as helping to Congress-(I) and he was transferred. not only that there are other cases also where the officers have been punished merely on the suspicion that they are helping to Congress Party. Here is a case Sir, where an honest officer has seized the smuggled goods and he has been transferred. I would request the Hon. Minister for Home to look into the matter and see that he is reinstated back to his earlier place.

SRI B. RACHAIAH.—Sir, he has already been transferred to Chittakula Police Station. He has also written to me that he does not want any retransfer. Therefore, there is no question of retransferring him. However, this Sub-Inspector has shown some boldness in catching the smugglers. But, after catching them, the Sub-Inspector did not act properly.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ನಾನು ಕೋಟಾ ಪೋಲೀಸ್ ಸ್ಟೇಷನ್‌ನಿಂದ ಅಲ್ಲಿಯ ಸಬ್ ಇನ್ಸ್‌ಪೆಕ್ಟರ್, ಅಲ್ಲಮಪ್ರಭು ಸಂಭೇದಾರ್‌ರವರನ್ನು ವರ್ಗಾವಣೆ ಮಾಡುತ್ತಾರೆಂಬುದನ್ನು ನಿರೀಕ್ಷಣೆ ಮಾಡಿದ್ದೆ. ಆದರೆ ಈ ರೀತಿಯಲ್ಲಿ ಅಲ್ಲ. ಯಾರು ತನ್ನ ಜೀವದ ಹಂಗನ್ನು ತೊರೆದು ೧೮ ಲಕ್ಷ ರೂಪಾಯಿಗಳ ಒಂದು ಬೆಲೆಯ ಕಳ್ಳ ಸಾಗಾಣಿಕೆಯ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೋ ಅಂತಹ ಒಬ್ಬ ಅಧಿಕಾರಿಯನ್ನು ಬಡ್ತಿ ನೀಡಿ, ಅವರಿಗೆ ಸರಕಾರದವರು ಅವಾರ್ಡ್ ಕೊಡುತ್ತಾರೆ

ಎನ್ನುವ ನಿರೀಕ್ಷೆಯಲ್ಲಿದ್ದೆ. ಆದರೆ ನನಗೆ ಬಹಳ ನಿರಾಶೆಯಾಯಿತು. ಸರಕಾರದವರು ಅವರಿಗೆ ಬಡ್ತಿ ನೀಡುವ ಬದಲು, ಅವರನ್ನು ವಿಕಾಪಿಕವರ್ಗಾವಣೆ ಮಾಡಿದ್ದಾರೆ. ಅದೂ ಅಲ್ಲದೆ, ವರ್ಗಾವಣೆ ಮಾಡುವಾಗ ಅವರು ಕೊಟ್ಟ ಹೇಳಿಕೆಯಲ್ಲಿ, ಅಲ್ಲಮ ಪ್ರಭು ಸುಭೇದಾರ್‌ರವರ ವರ್ಗಾವಣೆಗೆ ಸಾರ್ವಜನಿಕ ಹಿತದೃಷ್ಟಿಯೇ ಏಕಮಾತ್ರ ಕಾರಣ ಎಂದು ಹೇಳಿದ್ದಾರೆ. ಆದರೆ ಅಲ್ಲಿಯ ಸಾರ್ವಜನಿಕರು ನಮಗೆ ಆದೇ ಅಧಿಕಾರಿ ಬೇಕೆಂಬ ರೀತಿಯಲ್ಲಿ ಚಳುವಳಿಯನ್ನು ಕೂಡಾ ಮಾಡಿದ್ದಾರೆ. ಈ ವಿಷಯದಲ್ಲಿ ನನ್ನ ಕೈವಾಡ ಏನೂ ಇಲ್ಲ ಎಂದು ಒಬ್ಬ ಮಾಜಿ ಶಾಸಕರು ಕೂಡಾ ಪೇಪರ್‌ನಲ್ಲಿ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಇದರಿಂದಾಗಿ ಈ ವಿಷಯದಲ್ಲಿ ಅವರ ಕೈವಾಡ ಇದೆಯೇ ಎಂಬ ಸಂಶಯ ಉದ್ಭವವಾಗುತ್ತದೆ. ಸರಕಾರದವರು ಹೇಳಿಕೆಯನ್ನು ಈ ವಿಷಯದಲ್ಲಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈ ಸಂಶಯ ಎಲ್ಲಾ ಕಡೆಗಳಲ್ಲಿಯೂ ಇರುತ್ತದೆ. ಸ್ವಲ್ಪಮಟ್ಟಿಗೆ. ಎರಡು ಗುಂಪುಗಳು ಇರುವಾಗ ಅದು ಬಂದೇ ಬರುತ್ತದೆ. ಇಲ್ಲಿ ಈ ಅಧಿಕಾರಿಗಳು ಕೂಡಾ ನಮ್ಮ ಅಧಿಕಾರಿಗಳಿಗೆ, ಡಿ.ಜಿ.ಪಿ. ಯವರಿಗೆ ಕಾಗದ ಬರೆದಿದ್ದಾರೆ. ಅದು ಈ ರೀತಿಯಲ್ಲಿ ಇದೆ.

> "Sri Allamaprabhu Subedar has given his represetnation dated 18-6-1985 to the effect that his posting to Chittakula P.S. is to his liking and convenience and he may not be disturbed. He has also said that unnecessrily his transfer has been made a political issue and he has nothing to do with it. In this office letter No. Est-32/85-86, dated 22-6-85, it has been recommended that Sri Allamprabhu Subedar may be allowed to continue at Chittakula Police Station." ಎಂದೂ

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ. ಇದು ಬಹಳ ಗಂಭೀರವಾದಂತಹ ಸ್ವರೂಪವನ್ನು ಹಿಡಿದಿದೆ. ಈಗ ನಾವು ಇಲ್ಲಿ ಆ ಪಿ.ಎಸ್.ಐ. ಯವರನ್ನು ಕೋಟಾಕ್ಕೆ ಪುನಃ ವರ್ಗಾವಣೆ ಮಾಡಬೇಕೆಂದು ಇಲ್ಲಿ ವಾದ ಮಾಡಲಿಕ್ಕೆ ಬಂದದ್ದು ಅಲ್ಲ. ತಾವು ಸ್ಟೇ ಮಾಡಿ ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಬೇಕು. ಪರಿಶೀಲನೆಯಲ್ಲಿ ಒಂದು ವೇಳೆ ಅಧಿಕಾರಿ ತಪ್ಪಿತಸ್ಥರು ಆದರೆ ಅವರನ್ನು ಮನೆಗೆ ಕಳುಹಿಸಿ. We are not here to defind him ಆದರೆ ಇದರದ್ದು ಸ್ವಲ್ಪ ಯೋಗ್ಯತೆ ವಿಚಾರ ಆಲೋಚನೆ ಮಾಡಬೇಕಾಗುತ್ತದೆ ಏಕೆಂದರೆ, ೧೮ ಲಕ್ಷ, ೨೦ ಲಕ್ಷ, whatever it may be, ಅದನ್ನು ಹಿಡಿದಿದ್ದಾರೆ. ತಾವೂ ಕೂಡಾ ಒಪ್ಪಿಕೊಂಡಿದ್ದೀರಿ. ಅಷ್ಟು ಹಿಡಿಯಬೇಕಾದರೆ ಅಷ್ಟು ಪ್ರಾಮಾಣಿಕತೆ ಅವನಲ್ಲಿ ಇರಬೇಕಾಗುತ್ತದೆ. ಅಂತಹ ಧೈರ್ಯ ಅವನಲ್ಲಿ ಇರಬೇಕಾಗುತ್ತದೆ. ಖಾಣದ ಹಂಗು ಕೂಡಾ ತೊರೆದು ಆ ಕೆಲಸ ಮಾಡಿದ್ದಾರೆ. ತಾವು ಹೇಳಿದ್ದೀರಿ ಅದನ್ನು ಜಪ್ತಿ ಮಾಡಿದ್ದಾರೆ ಎಂದು, ಜಪ್ತಿಯನ್ನೂ ಕೂಡಾ ಪಿ.ಎಸ್.ಐ. ಮಾಡಿದ್ದಾರೆ ಎಂದು. ಆನಂತರ ಎರಡನೇ ಸೆಂಟನ್ಸ್‌ನಲ್ಲಿ, "ಈ ವಸ್ತುಗಳ ಸಾಗಾಣಿಕೆಗಾಗಿ ಉಪಯೋಗಿಸುತ್ತಿದ್ದ ಲಾರಿಯನ್ನು ವಶಪಡಿಸಿಕೊಳ್ಳಲಾಯ್ತು ಮತ್ತು ಲಾರಿಯ ಚಾಲಕನನ್ನು ದಸ್ತಗಿರಿ"— ಈಗ ಸೀಸ್ ಮಾಡಿದ್ದು ಯಾವಾಗ? ಲಾರಿ ಜಪ್ತಿ ಮಾಡಿದ್ದು ಯಾವಾಗ? ಮತ್ತು ಯಾವ ಪಿ.ಎಸ್.ಐ. ಮಾಡಿದ್ದು? ದಯವಾಡಿ ನಮಗೆ ವಿವರಗಳನ್ನು ಒದಗಿಸಿ. ಯಾಕೆಂದರೆ ಒಬ್ಬ ಪಿ.ಎಸ್.ಐ. ವರ್ಗಾವಣೆ ಇಲ್ಲಿ ಚರ್ಚೆಗೆ ಒಂದು ವಸ್ತು ಆಗಬಾರದು ಎಂದು ನನಗೆ ಗೊತ್ತಿದೆ. ಮತ್ತು He should not be a controversial person just because we have raised the issue. It is a non-political one. He should not be a political target because he is your officer.

ಶ್ರೀ ಕೆ. ಅಮರನಾಥ ಶೆಟ್ಟಿ.—ಅಧ್ಯಕ್ಷರೇ.....ನನಗೂ ಸ್ವಲ್ಪ ಇದರ ಬಗ್ಗೆ ಹೇಳಬೇಕಾಗಿದೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಕಾಲ್ ಅಟೆನ್‌ಷನ್ ಅವರು ಹಾಕಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಆಗತ್ಯ ಕಂಡರೆ ಅವರಿಗೂ ಅವಕಾಶ ಕೊಡಿ. ನಮ್ಮದೇನೂ ಅಡ್ಡಿ ಇಲ್ಲ. ಇದರಲ್ಲಿ ರಾಜಕೀಯ ಇಲ್ಲ. ವರ್ಗಾವಣೆಯಲ್ಲಿ ರಾಜಕೀಯ ಇದೆಯೆಂದು ಹೇಳಲಿಕ್ಕೆ ನಾವು ನಿಂತದ್ದಲ್ಲ. ಇದರಿಂದ ನ್ಯಾಯ ಜನತಾಗೂ ಸಿಗುವುದಿಲ್ಲ, ಕಾಂಗ್ರೇಸ್‌ಗೂ ಸಿಗುವುದಿಲ್ಲ. ಎಂದು ಹೇಳಿದರು. ಅಷ್ಟೇ ಹೊರತು ಅದಕ್ಕೆ ರೆಲವೆನ್ಸ್ ಇಲ್ಲ. ಅವರು ಹೇಳಿದ್ದಕ್ಕೆ there is no relevance: ಅಷ್ಟೇ ಹೊರತು no political motive has been attrubuted. We do not say that you are politicaly interested and you are transffering him. It is a Question of an integrity of that honest officer who has taken all risk to seize the smuggled goods, ಸ್ಮಗಲರ್ಸ್‌ನ್ನು ಹಿಡಿಯಲಿಕ್ಕೆ ನಿಜವಾಗಿ ಕಸ್ಟಮ್ಸ್‌ನವರು ಮಾಡಬೇಕಾದಂತಹ ಕೆಲಸವನ್ನು ಇವರು ಮಾಡಿದ್ದಾರೆ. ಇದರಲ್ಲಿ ಕಸ್ಟಮ್ಸ್‌ನವರು ಶಾಮೀಲು ಆಗಿದ್ದಾರೋ ಇಲ್ಲವೋ ಎಂದು, I cannot say now. It is left to the customs to investigate. ಏಕೆಂದರೆ, ಆ ವಿಷಯ ನಮಗೆ ಬೇಕಾಗಿಲ್ಲ. ಆದರೆ ಇದು ಸಾರ್ವಜನಿಕರ ವಿಷಯ. ಇದು ಪಕ್ಷದ ವಿಷಯ ಅಲ್ಲ. ಎಸ್. ಐ. ಯವರನ್ನು ನೀವು ಎಲ್ಲಿಯೇ ವರ್ಗ ಮಾಡಿ ಬೀದರ್‌ಗೆ ಮಾಡಿ, ಬಿಜಾಪುರಕ್ಕೆ ಮಾಡಿ, ಯಾಕೆಂದರೆ I have not seen that sub-Inspector at all He has also not represented to anyone to retain him. It should not give an impression that we are championing a cause of the transfer of a police officer. ಇಲ್ಲಿ ಟೆಲಿಕ್ಸ್ ಮ್ಯಾಸೇಜ್‌ನ್ನು ಕಳುಹಿಸಿ ಅವರನ್ನು ತತ್‌ಕ್ಷಣ ಅಲ್ಲಿ ವರ್ಗಾವಣೆ ಮಾಡಿದ್ದರಲ್ಲಿ ಏನೋ ನಮಗೆ ಕೆಲವೊಂದು ಭಾವನೆಗಳು ಇವೆ, ಟ್ರಾನ್ಸ್‌ಫರ್ ಮಾಡಿದ್ದರಲ್ಲಿ. He should have declared some award to him. ಆದರ ಬದಲು ಟ್ರಾನ್ಸ್‌ಫರ್ ಮಾಡಿದ್ದು ಪಾತ್ರವಲ್ಲ, ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆಂದು ಹೇಳಿ ತತ್‌ಕ್ಷಣ ಪುನಸ್ಸಿನಲ್ಲಿ ಒಂದು ರೀತಿಯಲ್ಲಿ ಪುನಸ್ಸಿನಲ್ಲಿ. ಕ್ಷೋಭೆ ತಂದು ಗೃಹಸಚಿವರು ಹೇಳಿಕೆಯಲ್ಲಿ ಒಂದು ಹೇಳಿದ್ದಾರೆ, ಈಗ ಹೊಸತಾಗಿ ಒಂದು ಹೇಳಿದ್ದಾರೆ. ಏನೆಂದರೆ ಅವರ ಬಗ್ಗೆ ಅನುಮಾನ ಆಗಿದೆ. ಏಕೆ ಲಾರಿ ಹಿಡಿದಿಲ್ಲ? ಏಕೆ ಅವರನ್ನು ಅರೆಸ್ಟ್ ಮಾಡಲಿಲ್ಲ. ಎಂದು ಹೇಳಿದ್ದಾರೆ. ಹಾಗಾದರೆ, ಲಾರಿ ಹಿಡಿಯದವರನ್ನು. ಅರೆಸ್ಟ್ ಮಾಡದವರನ್ನು, ಎಲ್ಲಾ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೀರಾ? ಸಸ್ಪೆಂಡ್ ಮಾಡಿದ್ದೀರಾ? ಎಲ್ಲಾ ಕೇಸ್‌ನಲ್ಲಿಯೂ ಮಾಡಿದ್ದೀರಾ? Please do not mix up politics here because the opposition has raised this issue. It is the question of integrity of a police officer. ಇನ್ನೂ ಆಲೋಚನೆ ಮಾಡಿ ಎಂದು ಈ ವಿಚಾರದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇಂತಹ ಅಧಿಕಾರಿಗಳ ವಿಚಾರದಲ್ಲಿ, ಅದರಲ್ಲಿಯೂ ೧೮ ಲಕ್ಷ ರೂಪಾಯಿಗಳ ಸ್ಮಗಲ್ಡ್ ಗೂಡ್ಸ್‌ನ್ನು ಹಿಡಿದುಕೊಟ್ಟ ಅಧಿಕಾರಿಗೆ ನೀವು ಅವಾರ್ಡ್ ಕೊಡಬೇಕಾಗಿತ್ತು. ಆದರ ಬದಲು ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಿದ್ದೇವೆ ಎಂದು ಕೊನೆಗೆ ಹೇಳಿದ್ದೀರಿ. that is the usual course. ಆದರೆ ಇದರಲ್ಲಿ ಅನುಮಾನ ಇದೆ. You could have come out with the statement. That means what you have said in the statement is a second thought. So do not kill the career of a police Sub-Inspector. ಈ ರೀತಿಯಲ್ಲಿ ಒಬ್ಬ ಪಿ.ಎಸ್.ಐ. ಅಷ್ಟು ಧೈರ್ಯದಿಂದ ಹಿಡಿದಿದ್ದ ಮಾಲು ಅದರಲ್ಲಿ ಏನಾದರೂ ಹೆಚ್ಚುಕಡಿಮೆ ಇದ್ದರೆ, ಸ್ಮಗಲರ್ಸ್‌ಗೆ ಬಿಟ್ಟುಕೊಟ್ಟಿದ್ದರೆ ಆತನನ್ನು ಟ್ರಾನ್ಸ್‌ಫರ್ ಅಲ್ಲ, ಅಂತಹವರನ್ನು ಸ್ಯಾಕ್ ಮಾಡಬೇಕು. If your suspicion is well-founded, you sack him. we do not question the decision of the Government. Instead, you have transferred an officer of integrity and honesty. ಆದರೆ ಇಲ್ಲಿ ಹೇಳಿಕೆಯಲ್ಲಿ ತಾವು ಒಂದು ರೀತಿ ಕೊಟ್ಟು, ಈಗ ನಾವು, ಆದನ್ನು ಈ ವಿಚಾರವನ್ನು ಸದನದಲ್ಲಿ ಎತ್ತಿದ್ದೇವೆ ಎಂದು ಅಷ್ಟು ಪಾತ್ರಕ್ಕೇನೆ, ಆ ಒಂದು ನಿಸ್ಪ್ರಹನಾದ ಪೋಲೀಸ್ ಅಧಿಕಾರಿಯ ಮೇಲೆ ತಾವು ಸಂಶಯದ ಒಂದು ಧಾಳಿಯನ್ನು ತಾವು ಮಾಡುವುದಿದ್ದರೆ, ತಮ್ಮ ಹತ್ತಿರ ಇದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ. ಈ ವಿಷಯದಲ್ಲಿ ನಮಗೆ ಸೂಕ್ತ ಉತ್ತರ ಕೊಡಬೇಕು.

As a Minister who is presiding over this Department, I never expected this kind of reply from you. ದಯಮಾಡಿ ತಾವು ಸಂಶಯ ಪ್ಯಕ್ತ ಪಡಿಸಿದ್ದೀರಿ, ಕೂಲಂಕಷವಾಗಿ ವಿಚಾರಣೆ ಮಾಡಿ ತಪ್ಪು ಮಾಡಿದ್ದರೆ ಶಿಕ್ಷೆ ಮಾಡಿ ಇಲ್ಲದಿದ್ದರೆ you

hold him as a Hero in your Department. ಇದನ್ನು ದಯವಾಡಿ ಕೂಲಂಕುಷವಾಗಿ ವಿಚಾರಣೆ ಮಾಡಿ. ಇದರಲ್ಲಿ ಯಾವುದೇ ತರಹದ ರಾಜಕೀಯ ಮಾಡದೆ ವಿಚಾರ ಮಾಡಿಸಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ. ತಕ್ಷಣ ಪರ್ಗಾಪಣೆ ಮಾಡುವುದಕ್ಕೆ ಕಾರಣ ಹೇಳಿದೆ. ನಾನು ಏತಕ್ಕೆ ಹೇಳಿದೆ ಅದನ್ನು ಮಾರಲ್‌ನಲ್ಲಿ ಸ್ವಲ್ಪಮಟ್ಟಿಗೆ ನಾವು ತಿಳಿಯತಕ್ಕಂಥದ್ದು ಕಾರಣವೆಂದು ಮಾನ್ಯ ಹಿರಿಯ ಸದಸ್ಯರಾದ ವೀರಪ್ಪ ಮೊಯ್ಲಿಯವರಿಗೆ ಹೇಳುತ್ತೇನೆ. ಮಾರಲ್‌ನಲ್ಲಿ ಕಡಿಮೆ ಮಾಡಬೇಕೆನ್ನುವ ಉದ್ದೇಶ ಇಲ್ಲ. ಹಿಡಿದಂತಹ ಪದಾರ್ಥಗಳು ಎಲ್ಲಿ ಹೋದವು ಎನ್ನತಕ್ಕಂಥ ಅನುಮಾನ ಬಂತು. ಅದಕ್ಕಾಗಿ ನಾವು ವಿಚಾರಣೆ ಮಾಡುತ್ತಿದ್ದೇವೆ. ಬೊನಾಫೈಡಿಯಾಗಿ ಅವರಿಗೆ ಸಿಗತಕ್ಕಂಥಾದ್ದನ್ನು ಕೊಡಬೇಕು. ಅದನ್ನು ಕೊಟ್ಟಿದ್ದೇವೆ. ಜೊತೆಗೆ ಇಲ್ಲಿ ಕಳ್ಳಂಸ್‌ನವರಿಗೆ ಸೇರಿರತಕ್ಕಂಥಾದ್ದು ಎಂದು ಬಿಟ್ಟು ಬಿಟ್ಟಿದ್ದಾರೆ ಎಂದು ತಿಳಿದು ಬಂತು. ಅದನ್ನು ವಿಚಾರ ಮಾಡುತ್ತಿದ್ದೇವೆ. ಇದರ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡೋಣ ಎನ್ನತಕ್ಕಂಥಾದ್ದು ನನ್ನ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ಕೆಲವು ದಾಖಲೆಗಳನ್ನು ಓದುತ್ತೇನೆ. ಮಾನ್ಯ ಮಂತ್ರಿಗಳು ಎಷ್ಟು ಅಸತ್ಯವನ್ನು ಈ ಸದನದಲ್ಲಿ ಹೇಳಿದ್ದಾರೆ ಎನ್ನುವುದಕ್ಕೆ ಇದೇ ಸಾಕ್ಷಿ ಸಾಕು. ಅವರ ಹೇಳಿಕೆಯಲ್ಲಿ ಏನು ಹೇಳಿದ್ದಾರೆ, ನೀವು ತಪ್ಪು ಹೇಳಿಕೆಯಲ್ಲಿ ಹೇಳಿದ್ದೀರಿ, ಲಾರಿಯನ್ನು ಬಿಟ್ಟುಬಿಟ್ಟಿದ್ದಾರೆ ಮತ್ತು ಆ ಜನರನ್ನು ಅರಸ್ಟ್ ಮಾಡಿಲ್ಲವೆಂದು ಹೇಳಿದ್ದೀರಿ.

ಶ್ರೀ ಬಿ. ರಾಚಯ್ಯ.—ನಾನು ಪರ್ಗಾಪಣೆ ಮಾಡುವುದಕ್ಕೆ ಕಾರಣ ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಸೀಜ್ ಮಾಡಿದ ಸಂದರ್ಭದಲ್ಲಿ ಏನು ಮಾಡಿದ್ದೀರಿ? ಈಗ ನನ್ನಲ್ಲಿ ಒಂದು ಪತ್ರ ಇದೆ. ಅದನ್ನು ಓದುತ್ತೇನೆ.

The Sub-Inspector of Police, Kota Police Station, addressed a letter to the Superintendent of Police, Dakshina Kannada District, *vide* his letter dated 7/5/1985. I quote from this letter.

SRI B. RACHAIAH.—It is a letter written by the Sub-Inspector to the Superintendent of Police. He is my officer. How did the Hon'ble Leader of the Opposition get this letter?

SRI S. BANGARAPPA.—You are not a Superior Officer.....

(INTERRUPTIONS)

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಕೂಡ ಇದೇ ರೀತಿಯ ಪಾಯಿಂಟ್ ರೈಜ್ ಮಾಡಿದ್ದರು. ವಿರೋಧ ಪಕ್ಷದವರು ಕದ್ದು ತರುತ್ತಾರೆ. ಅವರ ಮೇಲೆ ಬೇಕಾದರೆ ತಾವು ಕ್ರಮ ತೆಗೆದುಕೊಳ್ಳಿ. ಸರ್ಕಾರ ಯಾವಾಗ ಸರಿಯಾಗಿ ಕೆಲಸ ಮಾಡುವುದಿಲ್ಲವೋ ಆಗ ನಮ್ಮ ಹತ್ತಿರ ಬಂದು ಕೊಟ್ಟು ಹೋಗುತ್ತಾರೆ. ಆಗ ನಾವು ವಿಷಯ ಪ್ರಸ್ತಾಪ ಮಾಡಬೇಕಾಗುತ್ತದೆ. ವಿರೋಧಪಕ್ಷದವರ ಹಕ್ಕು ಅದು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಹೇಳಿದರು ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದರು ಎಂದು ಹೇಳಿದ್ದಾರೆ. ಅದಕ್ಕೆ ನನ್ನ ಮನಸ್ಸಿಗೆ ನೋವಾಯಿತು, ನನ್ನ ಹತ್ತಿರ ಕಾಪಿ ಇಟ್ಟುಕೊಂಡು ಏನಾದರೂ ತಪ್ಪು ವರದಿಯನ್ನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಹೇಳಿದ್ದರೆ ಆ ರೀತಿ ಹೇಳಬಹುದಿತ್ತು. ಆ ರೀತಿ ಏನೂ ಇಲ್ಲ.

SRI K.H. PATIL.—They are outrailing our rights. It is our duty to ventilate. Otherwise, we cannot function under democracy.

ಶ್ರೀ ಎಸ್. ಬಂಗಾರಪ್ಪ.—ಪತ್ರವನ್ನು ನನಗೆ ಬರೆಯಬೇಕಾಗಿತ್ತು ಎಂದು ಹೇಳಿದರಲ್ಲಾ ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ರಾಚಯ್ಯನವರಿಗೆ ಹೇಳುತ್ತೇನೆ. You are not a superior officer. You must know this...

(INTERRUPTIONS)

SRI S. BANGARAPPA.—The Sub-Inspector of Police, though he has written to the Superintendent of Police, he has addressed copies to Circle Inspector, and D.S.P., also. I quote from his letter:

> "On 7/5/1985 at Padukere in Manur village, lorry bearing No. So and So, was loading...gunny bags and around 40 persons armed with deadly weapons were engaged in loading. I and my staff on gun-point asked them to unarm. Immediately all ran way. On our chase we were able to catch two persons, one by name Abdul Rahaman s/o Mohideen. aged about 33 years, resident of Padubidri and another man by name James. On interrogation of the second man armed with Revolver...etc., etc."

I further quote the relevant portion:

> "When he came there at 11 P.M., on 6/5/1985, he was stopped by smugglers detained and lorry bearing No. 8708 by name Pushpa was loaded and sent by the smugglers etc., etc., and all the contraband articles seized apprehended Abdul R haman and James."

ನೀವು ಹೇಳಿರತಕ್ಕಂಥಾದ್ದು ಅವರು ಯಾರನ್ನೂ ಅರಸ್ಟ್ ಮಾಡಿಲ್ಲ ಎಂದು, ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದೀರಿ. ಆದರೆ ಇಬ್ಬರನ್ನು ಅರಸ್ಟ್ ಮಾಡಿದ್ದಾರೆ.

> "Information was sent to Custom authorities and Superiors etc., etc."

I have got the list of the articles. ಆ ಲಿಸ್ಟ್‌ನಲ್ಲಿ ಸುಮಾರು ೧೮ ಲಕ್ಷ ರೂಪಾಯಿಗಳ ಬೆಲೆ ಬಾಳುವಂತಹ ವಸ್ತುಗಳು ಇವೆ. ಆದರಲ್ಲಿ ಒಂದು ಟಿ.ವಿ. ೧೫ ಸಾವಿರ ರೂಪಾಯಿ. ಒಂದು ಲಾರಿ ಅದರ ಬೆಲೆ ಸುಮಾರು ೨ ಲಕ್ಷ ರೂಪಾಯಿಗಳು ಬೆಲೆ ಬಾಳುತ್ತದೆ. ೧೮ ಲಕ್ಷ ರೂಪಾಯಿಗಳ ಬೆಲೆ ಬಾಳುವಂತಹ ಸಾಮಾನುಗಳನ್ನು ತೆಗೆದುಕೊಂಡು ಸ್ಟೇಷನ್‌ಗೆ ಬಂದು ಅದನ್ನು ವೆರಿಫಿಕೇಷನ್ ಮಾಡಿ ವುದಕ್ಕಾಗಿ ಕಸ್ಟಮ್ಸ್ ಆಫೀಸರ್‌ಗೆ ಕಳುಹಿಸಿಕೊಡಬೇಕೆಂದು ಪೀಜ್ ಮಾಡಿ ತನ್ನ ಸುಪೀರಿಯರ್ ಆಫೀಸರ್ಸ್‌ಗೆ ತಿಳಿಸಿದ್ದಾನೆ. He is very fair in discharging his duties here. He seized articles worth Rs. 18 lakhs and according to him, his and his staff's lives were in danger. It is further stated in this letter.

> "This good work may kindly be recognised".

He has also recommended for Cash benefit to the Police Personnel who participated in this raid. The entire matter was reported in the Newspaper also.

SRI H.T. KRISHNAPPA.—Sir, I rise to a Point of Order...

(INTERRUPTIONS)

ಅಧ್ಯಕ್ಷರು.—ನಾನು ಏತಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇನೆ ಎಂದರೆ ಮಾನ್ಯ ವಿರೋಧಪಕ್ಷದ ನಾಯಕರಿಂದ ಹೊಸ ವಿಚಾರ ಬಂದಿದೆ. ಗೃಹಮಂತ್ರಿಗಳೂ ಇಲ್ಲಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಗೃಹಮಂತ್ರಿಯವರಿಗೆ ಅವರು ಹೇಳುತ್ತಿದ್ದಾರೆ. ಗೃಹಮಂತ್ರಿಯವರು ಉತ್ತರ ಕೊಡುತ್ತಾರೆ. ಆಮೇಲೆ, ಮುಗಿಸಿ. ಸೂಟೆಬಲ್ ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಗೃಹಮಂತ್ರಿಯವರು ಹೇಳಿದ್ದಾರೆ. ಹೊಸ ವಿಚಾರ ಹೇಳುತ್ತಿದ್ದಾರೆ ಅದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ವಿಶೇಷ ಸಂದರ್ಭದಲ್ಲಿ ತಾವು ಯಾರಿಗೆ ಬೇಕಾದರೂ ಅನುಮತಿ ಕೊಡಬಹುದು. ವಿಷಯ ಪ್ರಸ್ತಾಪ ಮಾಡುವುದಕ್ಕೆ. ತಮ್ಮ ಅಧಿಕಾರವನ್ನು ಪ್ರಶ್ನೆ ಮಾಡುತ್ತಿಲ್ಲ. ತಾವು ಪದೇಪದೇ ಹೇಳುತ್ತಿರುತ್ತೀರಿ. ಕಾಲಿಂಗ್ ಅಟೆನ್‌ಷನ್ ಮೋಷನ್‌ಗೆ ಸಂಬಂಧಪಟ್ಟ ಹಾಗೆ ಯಾರ ಹೆಸರು ಇರುತ್ತದೆ, ಅಂತಹವರಿಗೆ ಮಾತ್ರ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ, ಬೇರೆ ಯವರಿಗೆ ಇಲ್ಲ ಎಂದು. ಮಾನ್ಯ ಬಂಗಾರಪ್ಪನವರು ವಿಷಯ ಪ್ರಸ್ತಾಪ ಮಾಡುವುದಕ್ಕೆ ಹೊರಟಾಗ ತಮ್ಮ ಅನುಮತಿಯನ್ನು ಕೇಳಿದ್ದನ್ನು ನಾವು ಕೇಳಿಕೊಳ್ಳಲಿಲ್ಲ. ನೀವು ಕೊಟ್ಟದ್ದನ್ನೂ ನಾವು ಕೇಳಿಕೊಳ್ಳಲಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರಿಗೆ ನಾನು ಹೇಳುತ್ತೇನೆ. ನೀವು ಏತಕ್ಕೆ ಗಲಾಟೆ ಮಾಡುತ್ತೀರಿ. ನಾನು ಅವರಿಗೆ ಹೇಳುತ್ತಿದ್ದೇನೆ. ನಾನು ಆಮೇಲೆ ರೂಲಿಂಗ್ ಕೊಡುತ್ತೇನೆ ಕುಳಿತುಕೊಳ್ಳಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅವರ ಅಭಿಪ್ರಾಯದಲ್ಲಿ ಅದು ಮಹತ್ವದ ವಿಷಯ ಎಂದು ಹೇಳುತ್ತೇನೆ, ಅದು ಅವರ ಮನಸ್ಸಿನಲ್ಲಿ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ, ಅವರು ಹೇಳುತ್ತಿದ್ದಾರೆ. ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರಿಗೆ ಅವಕಾಶ ಕೊಟ್ಟಿದ್ದೇನೆ. ಆಮೇಲೆ ರೂಲಿಂಗ್ ಕೊಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನಾನು ಆ ವಿಷಯಕ್ಕೇ ಹೇಳುವುದು, ಅವರಿಗೆ ಗೊತ್ತಿರತಕ್ಕಂಥ ವಿಚಾರಗಳನ್ನು ಅವರು ತಮ್ಮ ಮುಂದೆ ಇಡುತ್ತಿದ್ದಾರೆ. ಅದೇರೀತಿ ಪಂಗಳೂರಿನಿಂದ ಬಂದಿರ ತಕ್ಕಂಥ ನಮ್ಮ ಸ್ನೇಹಿತರೂ ಕೂಡಾ ಅವಕಾಶ ಕೊಡಬೇಕೆಂದು ಕೇಳಿದ್ದಾರೆ. ಒಂದು ವೇಳೆ ಅವರಿಗೆ ಅವಕಾಶ ಕೊಟ್ಟರೆ, ಬೇರೆಯವರಿಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅವರಿಗೆ ಅವಕಾಶ ಕೊಟ್ಟರೆ, ಬೇರೆಯವರಿಗೆ ವಿಷಯದ ಬಗ್ಗೆ ಗೊತ್ತಿರುವವರಿಗೆ ಅವಕಾಶ ಕೊಡಬೇಕೆಂದು ನನ್ನ ಮನವಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಅವರ ಪಾಯಿಂಟ್ ಆಫ್ ಆರ್ಡರ್ ಕರೆಕ್ಟ್. ಅವರು ಹೇಳುತ್ತಿದ್ದಾರೆ, ನಾನು ರೂಲಿಂಗ್ ಕೊಡುತ್ತೇನೆ, ರೂಲ್ ಇರುವುದು ಕರೆಕ್ಟ್. ಎಷ್ಟು ಮಂದಿ ಕಾಲಿಂಗ್ ಅಟೆನ್‌ಷನ್‌ಗೆ ಸಹಿ ಹಾಕಿರುತ್ತಾರೆ, ಅವರಿಗೆ ಮಾತ್ರ ಅವಕಾಶ ಕೊಡತಕ್ಕದ್ದು ರೂಲ್‌ನಲ್ಲಿ ಇದೆ. ೫ ಮಂದಿಗೆ ಕೊಟ್ಟಿದ್ದೇನೆ. ವಿರೋಧಪಕ್ಷದ ನಾಯಕರಿಗೆ ವಿಶೇಷ ಅವಕಾಶ ಏತಕ್ಕೆ ಕೊಟ್ಟೆ ಎಂದರೆ, He wants to enlighten the Hon'ble Minister. ಹೊಸ ವಿಚಾರ ಹೇಳುತ್ತಿದ್ದಾರೆ. ಹೊಸ ವಿಚಾರ ಗೃಹಮಂತ್ರಿಗಳಿಗೆ ಗೊತ್ತಾದರೆ ನೇರವಾಗಿ ಷಿಟ್ಕ್ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಅವಕಾಶ ಆಗುತ್ತದೆ. ಈ ದೃಷ್ಟಿಯಿಂದ ಅವಕಾಶ ಕೊಟ್ಟಿದ್ದೇನೆ. ಬೇರೆ ಯಾರಿಗೂ ಕೊಡುವುದಿಲ್ಲ. ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು.—ನಿಮ್ಮ ಸ್ಟೇಟ್‌ಮೆಂಟ್ ಆಮೇಲೆ ಹೇಳಿ, He wants to enlighten the Home Minister. ಅವರು ಹೇಳುತ್ತಾರೆ, ಮುಗಿಸಿಬಿಡುತ್ತಾರೆ. ಹೊಸ ವಿಚಾರ ಇದ್ದರೆ ಹೇಳಿ.

ಶ್ರೀ ಕೆ. ಆಪರನಾಥಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಿಂದ ನಾನು ಬಂದಿರುತ್ತೇನೆ...

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ಬಸಪರಾಜ್‌ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇವೆ, ಅವಕಾಶ ಯಾರಿಗೂ ಇಲ್ಲ. as a special case Leader of the Oppositionಗೆ ಅವಕಾಶ ಕೊಟ್ಟಿದ್ದೇನೆ. ಬೇರೆ ಯಾರಿಗೂ ಕೊಡುವುದಿಲ್ಲ. ಬಂಗಾರಪ್ಪನವರೇ ತಾವು ಏನಾದರೂ ಹೇಳುವುದು ಇದ್ದರೆ ಹೇಳಿಬಿಡಿ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ನನ್ನಪರವಾಗಿ ತಾವು ಯಾರೂ ಪ್ರಾತನಾಡ ತಕ್ಕದ್ದಲ್ಲ. ಬಂಗಾರಪ್ಪನವರೇ ದಯವಿಟ್ಟು ಮುಗಿಸಿ. ಗೃಹಮಂತ್ರಿಯವರು ಉತ್ತರ ಕೊಡುತ್ತಾರೆ. I will take suitable action ಎಂದು ಹೇಳಿದಾರೆ. ನಿಮ್ಮದೇನಾದರೂ ಹೊಸ ವಿಚಾರ ಇದ್ದರೆ ಕಳುಹಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರ ಹಕ್ಕಿಗೆ ಅಡ್ಡಬರಬೇಕು ಎಂದು ಉದ್ದೇಶ ಅಲ್ಲ, ತಾವು ಅವಕಾಶ ಕೊಟ್ಟಿದರಿಂದ ಎದ್ದೆ. ಹಾಗೆ ಹೇಳಬೇಕೆಂಬ ಉದ್ದೇಶ ಅಲ್ಲ. ತಮ್ಮ ಅಭಿಪ್ರಾಯದಲ್ಲಿ ಮಾನ್ಯ ಸದಸ್ಯರಲ್ಲಿ ಬೇರೆಯವರಿಗೆ ಅವಕಾಶ ಕೊಡಬೇಕೆಂದು ಅಭಿಪ್ರಾಯ ವಾದರೆ ಅದಕ್ಕೆ ಅಡ್ಡಬರುವುದಿಲ್ಲ. ತಮ್ಮ ಅಭಿಪ್ರಾಯ ಹೇಳುವುದಕ್ಕೆ ಅವರಿಗೆ ಸ್ವತಂತ್ರ ಇದೆ. ಕೇಳುತ್ತಾರೆ. ಸೂಟಬಲ್ ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಅವರು ಹೇಳಿದ್ದಾರೆ, ಆದರೆ ಅದು ಸಮಸ್ಯೆಗೆ ಸಿದ್ಧೌಷಧ ಅಲ್ಲ, ರಾಮಬಾಣನೂ ಅಲ್ಲ.

(ಗೊಂದಲ)

ಅಧ್ಯಕ್ಷರು.—ಸಿದ್ಧೌಷಧ, ರಾಮಬಾಣ ಅದು ಬೇಡ. ಏನಾದರೂ ಹೊಸ ವಿಚಾರ ಇದ್ದರೆ ಅದು ಹೇಳಿಬಿಡಿ. ಹೊಸ ವಿಚಾರ ಏನಾದರೂ ಇದ್ದರೆ ಹೇಳಿ, ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಹೀಗೆ ಕುಳಿತುಕೊಂಡುಬಿಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಬರೆದು ಕಳುಹಿಸಿದರೂ ಅಡ್ಡಿಯಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಬರೆದು ವ್ಯವಹಾರ ಮಾಡಿಕೊಳ್ಳಬೇಕಾದರೆ, ಹೊರಗಡೆ ವ್ಯವ ಹಾರ ಮಾಡಿಕೊಳ್ಳಬಹುದು. ಅಸೆಂಬ್ಲಿಗೆ ಏತಕ್ಕೆ ಬರಬೇಕು. ಪೋಸ್ಟ್ ಆಫೀಸ್ ಇದೆ, ಬರೆದು ವ್ಯವಹಾರ ಮಾಡಿಕೊಳ್ಳಬೇಕಾದರೆ ಅಲ್ಲೇ ಮಾಡಬಹುದು.

ಅಧ್ಯಕ್ಷರು.—ಇಷ್ಟು ಹೊತ್ತಿಗೆ ಆಗಿ ಹೋಗುತ್ತಿತ್ತು. ಹೇಳಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ಓದುವುದು ಏನಿಲ್ಲ. ನಾನು ವಿವರಿಸುವೆ. ಕಾಲವ್ಯಯ ಮಾಡು ವುದಕ್ಕೆ ನಾನು ಸಿದ್ಧನಾಗಿಲ್ಲ. ಪೋಲೀಸ್ ಪರ್ಸೂನಲ್ ಹೋಗಿ ಕಷ್ಟಪಟ್ಟು ಕೆಲಸ ಮಾಡಿದರು. ಅವರಿಗೆ ಕ್ಯಾಷ್ ಬೆನಿಫಿಟ್ ಹೊಗಳಿಕೆ ಪತ್ರ ಬೇಕೆಂದು, ರೆಕಮೆಂಡ್ ಮಾಡಿ, ತನಗೆ ಕೇಳಲಿಲ್ಲ ಪೋಲೀಸ್ ಪರ್ಸೂನಲ್‌ಗೆ, ಅವರದ್ದೂ ಸೇರಿತ್ತು ಎಂಬ ಅಭಿಪ್ರಾಯ ಇಟ್ಟುಕೊಳ್ಳಿ, ತೆಗೆದು ಕೊಂಡು ಹೋಗಿ ವರ್ಗಮಾಡಿದ್ದಾರೆ. ವರ್ಗ ಮಾಡಿ, ಅಲ್ಲೇ ತಂದಿಡಬೇಕೆಂದು ಒತ್ತಡ ನಾನು

ಮಾಡುವುದಿಲ್ಲ. ಆದು ತಪ್ಪು ಅಭಿಪ್ರಾಯ. ಒಳ್ಳೆಯ ಕೆಲಸ ಮಾಡಿದಂಥ ವ್ಯಕ್ತಿಯನ್ನು ಮತ್ತೊಂದು ಕಡೆ ವರ್ಗ ಮಾಡಿದ್ದೀರಿ. ನಾನು ನನ್ನ ಭಾಷಣದಲ್ಲಿ ತೆಗೆದುಕೊಂಡು ಬರುತ್ತೇನೆ. ಆದುದರಿಂದ ತೆಗೆದುಕೊಂಡು ಹೋಗಿ ವರ್ಗ ಮಾಡಬೇಕೆಂದು ಇಟ್ಟಿದ್ದೀರಲ್ಲ, ನಿಜವಾಗಿಯೂ ಇದು ನಿಮಗೆ ಒಳ್ಳೆಯ ಹೆಸರು ತರುತ್ತದಾ ? ಮಾನ್ಯ ರಾಚಯ್ಯನವರು ಈಕೆಲಸಕ್ಕೆ ಕೈಹಾಕಬಾರದಾಗಿತ್ತು ಎಂದು ನನ್ನ ಭಾವನೆ ಇದೆ. ನಮಗೆ ಬಂದಿರತಕ್ಕಂತ ವರದಿಗಳ ಪ್ರಕಾರ ಸಂಬಂಧ ಇರತಕ್ಕವರು ಯಾರು, ಏನು ಕೇಸ್ ಮಾಡಿದ್ದಾರೆ. ಗೂಡ್ಸ್‌ನ್ನು, ಅವರ ಪ್ರಭಾವಕ್ಕೆ ಒಳಗಾಗಿ ಮಾಮೂಲಾಗಿಯೂ ಮಾಡಿಲ್ಲ, ಟೆಲಿಕ್ಸ್ ಮೆಸೇಜ್ ಮೂಲಕ ವರ್ಗ ಮಾಡಿರುತ್ತೀರಿ.

ಅಧ್ಯಕ್ಷರು.—ಅದನ್ನು ವೀರಪ್ಪ ಮೊಯಿಲಿಯವರು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಹೇಳಿದ್ದರೆ. ಬಹಳ ಸಂತೋಷ. ಆದುದರಿಂದ ಈ ಬಗ್ಗೆ ಅಸತ್ಯ ಹೇಳುತ್ತಿದ್ದಾರೆ. ಎಂಬುದಕ್ಕೆ ಈ ಪತ್ರ ಸಾಕು.

ಶ್ರೀ ಬಿ. ರಾಚಯ್ಯ.—ಅವರಿಗೆ ಬಹಳ ಅಪ್ಯಾಯಮಾನವಾಗಿದೆ, ಅಸತ್ಯ, ಅಸತ್ಯ ಎಂದು ಅವರಿಗೆ ರೂಡಿಯಾಗಿರಬೇಕು. ಇಪತ್ತು ಹೇಳುತ್ತಿದ್ದೇನೆ, ಸಾರ್ವಜನಿಕ ಹಿತ ದೃಷ್ಟಿಯಿಂದ ಅವರನ್ನು ವರ್ಗ ಮಾಡಿರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಸತ್ಯ, ಎಂದರೆ ಅವರಿಗೆ ಕೋಪವೇ, ಬೇರೆ ಪದ ಹೇಳಿಕೊಡಿ ಉಪಯೋಗ ಮಾಡಿಕೊಳ್ಳುತ್ತಾರೆ.

ಅಧ್ಯಕ್ಷರು.—ನೇರವಾಗಿ ಹೇಳಿಬಿಡಿ.

ಶ್ರೀ ಬಿ. ರಾಚಯ್ಯ.—ಡಿಮ್ಯಾಂಡ್ ಬರುತ್ತದೆ, ಆಗ ಆ ಕಡೆಯವರೂ ಈ ಕಡೆಯವರೂ ಮಾತನಾಡಲಿ, ಈ ವಿಷಯಕ್ಕೆ ಸಂಬಂಧ ಪಟ್ಟ ಹಾಗೆ ನನಗೆ ಎಸ್. ಪಿ. ಯಿಂದ ಇನ್‌ಫರ್‌ಮೇಷನ್ ಬಂದ ತಕ್ಷಣ ನನಗೆ ಖುಷಿಯಾಯಿತು, ಆಮೇಲೆ ಇಟ್ಟುಕೊಂಡು ಏನು ಮಾಡಿದರು ಎಂಬುದರ ಮೇಲೆ ಬೇರೆ ರೀತಿ ಮಾತುಕತೆಗಳು ನಡೆದಿದೆ. ಇದಕೋಸ್ಕರ ವರ್ಗ ಮಾಡಿದೆ, ನನ್ನ ತಿಳುವಳಿಕೆಯಲ್ಲಿ ಇದು ತಪ್ಪಾಗಿದ್ದರೆ, ನಾನು ಇಪತ್ತೂ ಹೇಳುತ್ತಿದ್ದೇನೆ ನಾನು ಅಂಥಹವರಿಗೆ ಕರ್ಬ್ ಮಾಡಲಿಕ್ಕೆ ಇಷ್ಟ ಇಲ್ಲ. ಯಾವುದೇ ಪಕ್ಷ ಇರಲಿ, ಆ ವಿಷಯ ಬೇರೆ, ಪ್ರಾಮಾಣಿಕರಿಗೆ ಬೆಂಬಲ ಕೊಡಬೇಕೆಂದು ನಾನು ಸದುದ್ದೇಶ ಇಟ್ಟುಕೊಂಡಿರುವುದರಿಂದ ಅಂತಹವರ ವಿಷಯದಲ್ಲಿ ನಾನು ನಿಜವಾಗಿಯೂ ಏನು ನಡೆದಿದೆ ಅದನ್ನು ವೈಯಕ್ತಿಕವಾಗಿ ಪರಿಶೀಲನೆ ಮಾಡುತ್ತೇನೆ, ಅವರಿಗೆ ಬಹುಮಾನ ಕೊಡಬೇಕು, ಪ್ರಮೋಷನ್ ಕೊಡಬೇಕೆ ಎಂಬುದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಒಂದು ಹೊಸ ವಿಚಾರ. ನಾನು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೇನೆ, ಹೇಳಿಕೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಿರುತ್ತೇವೆಂದು...

(ಗೊಂದಲ)

ಅಧ್ಯಕ್ಷರು.—ವೀರಪ್ಪಮೊಯಿಲಿಯವರೇ ಈಗ ಸಾಕು.

ಶ್ರೀ ಎಂ. ವೀರಪ್ಪಮೊಯಿಲಿ.—ರೂಲ್ ೧೯೦ರ ಪ್ರಕಾರ ಪ್ರಿವಿಲೇಜ್ ಮೋಷನ್ ಕಳುಹಿಸಿರುತ್ತೇನೆ, ಏಕೆಂದರೆ, ದಯವಿಟ್ಟು ಪ್ರಿವಿಲೇಜ್ ಮೊಷನ್ ನಾನು ಕಳುಹಿಸಿದ್ದೇನೆ. ಹೇಳಿಕೆಯಲ್ಲಿ ಕೇಸ್ ಮಾಡಿಲ್ಲ, ಅರೆಸ್ಟ್ ಮಾಡಿಲ್ಲ, ಎಂದು ಇಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಿದ್ದೇವೆಂದು ಹೇಳಿಕೆಯಲ್ಲಿ ಇದೆ.

(ಗೊಂದಲ)

ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಿದ್ದಾರೆಂದು ಹೇಳಿಕೆಯಲ್ಲಿ ಇದೆ. I have given a notice of privilage motion under rule 190.

(ಗೊಂದಲ)

SRI M. VEERAPPA MOILY.—This is a very imoprtant matter.

MR. SPEAKER.—I will look into it. ಅದನ್ನು ನಾನು ನೋಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಸರಿಯಾದ ಮಾಹಿತಿಯನ್ನು ಸನ್ಮಾನ್ಯ ಸಚಿವರು ಕೊಟ್ಟಿಲ್ಲ ಇದರಲ್ಲಿ ಸ್ಪಷ್ಟ ಇದೆ. ಸೆಕ್ಷನ್ ೧೯೦ರ ಪ್ರಕಾರ ನಾನು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೇನೆ. ಏಕೆಂದರೆ ನಾವು ಇಲ್ಲಿ ಪ್ರಶ್ನೆಯನ್ನು ಎತ್ತಿದ್ದೇವೆಂದು, ಒಂದೇ ಒಂದು ವಿರೋಧಪಕ್ಷದವರು ಎತ್ತಿದ್ದೇವೆಂಬ ಏಕೈಕ ಪಾತಿನಿಂದ ಈ ಪ್ರಶೀಕಾರವನ್ನು ಸಬ್‌ಇನ್ಸ್‌ಪೆಕ್ಟರ್ ಮೇಲೆ ತೋರಿಸಿದರು ನಮ್ಮ ಮೇಲೆ ತೋರಿಸಿದರು. ಇಬ್ಬರ ಮೇಲೂ ಪ್ರತೀಕಾರ ತೋರಿಸುವುದು ಸರಿಯಲ್ಲ. ಹೀಗಾದರೆ ಯಾವ ವಿಚಾರವನ್ನೂ ಧೈರ್ಯವಾಗಿ ಇಲ್ಲಿ ಎತ್ತುವುದಕ್ಕೆ ಆಗುವುದಿಲ್ಲ. ಹೇಗೆ ಎತ್ತುವುದು? no, no ... ನಾವು ವಿಚಾರವನ್ನು ಎತ್ತಿದ್ದೇವೆಂದು ಹೇಳಿ ತಾವು ಆ ಸಬ್ ಇನ್ಸ್‌ಪೆಕ್ಟರ ಮೇಲೆ ಅನ್ಯಾಯ ಮಾದಂಥ ಒಂದು ಆರೋಪಣೆ ಮಾಡುವುದಕ್ಕೆ ಹೋಗಿದ್ದೀರಿ. ಟ್ರಕ್ ಸೀಜ್ ಮಾಡಿದ್ದಾರೆ. ಜನಗಳನ್ನು ಅರೆಸ್ಟ್ ಮಾಡಿದ್ದಾರೆ. ಅದು ಎರಡೂ ಮಾಡಿಲ್ಲ ಅಂತ ಹೇಳಿದರೆ ಹೇಗೆ ? It is a deliberate attempt.

ಅಧ್ಯಕ್ಷರು.—ವೀರಪ್ಪಮೊಯಿಲಿಯವರೇ, ಇಲ್ಲಿ ಕೇಳಿ, ಮಹತ್ವದ ವಿಚಾರವನ್ನು ತಾವು ಎತ್ತಿದ್ದೀರೆಂದು ಹೇಳಿದ್ದೇನೆ. ವಿರೋಧಪಕ್ಷದವರಿಗೂ ಅವಕಾಶ ಮಾಡಿಕೊಟ್ಟಿದ್ದೇನೆ, ರೂಲ್ಸ್ ನಲ್ಲಿ ೫ ಮಂದಿಗೆ ಅವಕಾಶ ಇದ್ದರೂ ಕೂಡ ಎಲ್ಲರಿಗೂ ಅವಕಾಶ ಮಾಡಿಕೊಟ್ಟಿದ್ದೇನೆ. ಮಂತ್ರಿಗಳು ನಾನು ಇಮ್ಮೀಡಿಯಟ್ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಎಲ್ಲಿ, ಎಲ್ಲಿ, ಹೇಳಿದ್ದಾರೆ ? ಉತ್ತರ ಕೊಡುವುದು ಏನು ? He has to withdraw.

(ಗೊಂದಲ)

ಅಧ್ಯಕ್ಷರು.—ಹೇಳಿದ್ದಾರೆ, ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅವರು ಹೇಳಿದ್ದಾರೆ, ಟ್ರಕ್ ಸೀಜ್ ಮಾಡಿಲ್ಲ, ಅರೆಸ್ಟ್ ಮಾಡಿಲ್ಲ ಅಂತ ಹೇಳಿದ್ದಾರೆ, ರೆಕಾರ್ಡ್ಸ್ ಪ್ರಕಾರ.....

(ಗೊಂದಲ)

ಅಧ್ಯಕ್ಷರು,—ರೆಕಾರ್ಡ್ಸ್ ತರಿಸಿ ನೋಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಏನು ರೆಕಾರ್ಡ್ಸ್ ತರಿಸಿ ನೋಡುವುದು?

ಅಧ್ಯಕ್ಷರು.—ಸ್ವಲ್ಪ ಸಮಾಧಾನವಾಗಿ ಇರಿ, ಎಲ್ಲವನ್ನೂ ಕೇಳಿರಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ರೆಕಾರ್ಡ್‌ಗೆ ಹೋಗುತ್ತದೆ. ಪತ್ರಿಕೆಯಲ್ಲಿ ಬರುತ್ತದೆ. ದಯವಿಟ್ಟು ಅವರು ಹೇಳಲಿ, ನಾನು ಹೇಳಿದುದರಲ್ಲಿ ಹೆಚ್ಚು ಕಡಿಮೆ ಇದ್ದರೆ ನಾನು ಅದನ್ನು ವಿಚಾರ ಮಾಡಿ ಈ ಸಭೆಗೆ ಸಂಪೂರ್ಣವಾದ ವರದಿಯನ್ನು ಕೊಡುತ್ತೇನೆ. ಎಂದು ಹೇಳಲಿ.

ಅಧ್ಯಕ್ಷರು.—ಕೇಳಿಯಾದರೂ ಕೇಳೋಣ ಸ್ವಲ್ಪ ತಡೆಯಿರಿ.

ಶ್ರೀ ಬಿ. ರಾಚಯ್ಯ.—ನನಗೆ ತಕ್ಷಣ ವರ್ಗ ಮಾಡುವುದಕ್ಕೆ ಕಾರಣ ಏನು ಎಂದು ಕೇಳಿದ ಕ್ಯೂಸ್ಕರ, ಯಾವುದು ಮೊದಲು ನನಗೆ ಇನ್‌ಫರ್‌ಮೇಷನ್ ಬಂದಿತ್ತು ಎಂಬುದನ್ನು ಹೇಳದೆ ಸೀಜ್ ಮಾಡಿದ್ದಾರೆ. ಎಂದು ಕೇಳಿ ನನಗೆ ಸಂತೋಷವಾಯಿತು. ಒಳ್ಳೆಯವರು ಒಬ್ಬರಾದರೂ ಸಿಕ್ಕರಲ್ಲ ಎಂದು. ಆದರೆ ಸೀಜ್ ಮಾಡಿದ ಪ್ರಾಪರ್ಟಿಯನ್ನು ಕೇಸ್ ಹಾಕದೆ ಹಾಗೆಯೇ ಮಾಡಿದ್ದಾರೆ ಎಂದಕ ವರ್ತಮಾನ ಬಂತು. ಆದಕ್ಕೋಸ್ಕರ ಅವರನ್ನು ವರ್ಗ ಮಾಡಿ ಎಂದು ಹೇಳಿದ್ದು ನಿಜ.

(ಗೊಂದಲ)

ಶ್ರೀ ಬಿ. ರಾಚಯ್ಯ.—ನನಗೆ ಬಂದ ವರ್ತಮಾನದ ಪ್ರಕಾರ, ರಿಪೋರ್ಟ್ ಪ್ರಕಾರ ಬಂದಿರ ತಕ್ಕಂಥದ್ದು ಏನೆಂದರೆ ಸೀಜ್‌ಮಾಡಿದ್ದಾರೆ, ಸೀಜ್‌ಮಾಡಿ ಅವರಿಗೆ ಕೊಟ್ಟುಬಿಟ್ಟರು ಎಂದು ಕಸ್ಟಂಸ್ ವಶಕ್ಕೆ ಬಂತು ಅಂತ ಹೇಳಿ ಅವರಿಗೇ ಕೊಟ್ಟಿದ್ದಾರೆ. ಇದು ನಡೆದಿರತಕ್ಕ ವಿಷಯ ಇದು ಆಗಿದ್ದು ಸರಿಯೇ ಎನ್ನುವುದನ್ನು ವಿಚಾರ ಮಾಡುತ್ತೇನೆ. ನ್ಯಾಯ ದೊರಕಿಸುವಂತೆ ಮಾಡೋಣ ಎಂದು ಹೇಳುತ್ತೇನೆ.

SRI M. VEERAPPA MOILY.—How about your statement on the seizure of the truck and arrest of the persons? ಅದನ್ನು ಹೇಳಲಿ.

ಅಧ್ಯಕ್ಷರು.—ವೀರಪ್ಪಮೊಯಿಲಿಯವರೇ, ಮಾನ್ಯ ಸಚಿವರು ಉತ್ತರ ಹೇಳುತ್ತಾರೆ ತಡೆಯಿರಿ ಸ್ವಲ್ಪ ಸಮಾಧಾನವಾಗಿ ಇರಿ. ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಅಧ್ಯಕ್ಷರು.—ನೋಡಿ, ನಿಮ್ಮೆಲ್ಲರಿಗೂ ಅವಕಾಶ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಏನು ಮಾಡಿದರು, ಹಿಡಿದಿದ್ದನ್ನು ಸೀಜ್ ಮಾಡಿಬಿಟ್ಟು ಬಂದರು. ಸೀಜ್ ಮಾಡಿ ಅವರು ಬಂದರು ಅಂತ ಬಿಟ್ಟರು.

ಅಧ್ಯಕ್ಷರು.—ಮಾನ್ಯ ವೀರಪ್ಪಮೊಯಿಲಿಯವರೇ ಸ್ವಲ್ಪ ಸಮಾಧಾನವಾಗಿ ಕೇಳಿರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಅರೆಸ್ಟ್ ಮಾಡಿ ಎಂದು ಅವರೇ ರಿಪೋರ್ಟ್ ಕೊಟ್ಟಿದ್ದಾರಲ್ಲ ಅಧ್ಯಕ್ಷರೇ;

ಶ್ರೀ ಬಿ. ರಾಚಯ್ಯ.—ಸೀಜ್ ಮಾಡಿದರು, ಮಾಡಿದನ್ನು ಅಪರ ಹಸ್ತಿರ ಕೊಟ್ಟರು. ಏನೇನು ಸೀಜ್ ಮಾಡಿದರು, ಸಿಕ್ಕಿ ಸಿಕ್ಕಿದ್ದನ್ನೆಲ್ಲಾ ಸೀಜ್ ಮಾಡಿದ್ದೇವೆಂದು ಹೇಳಿ ಬರೆದು, ಅವರಿಗೆ ಕೊಟ್ಟರು ಆದರೆ ಅದನ್ನು ಕೊಟ್ಟಿದ್ದೇನೆಂದು ತೆಗೆದುಕೊಂಡಿಲ್ಲ: ಆ ರೀತಿ ತೆಗೆದುಕೊಂಡಿದ್ದರೆ ಅವರಿಗೆ ಕ್ರೆಡಿಟ್ ಬರುತ್ತಿತ್ತು ಅಂತ ಹೇಳುವುದು. ಆವರಿಂದ ಇದನ್ನು ತೆಗೆದುಕೊಂಡಿಲ್ಲ. ಅದನ್ನು ನಾನು ಹೇಳುವುದು

ಶ್ರೀ ಎಂ. ವೀರಪ್ಪಮೊಯ್ಲಿ.—ಸೀಜ್ ಮಾಡಿದ್ದಾರೆ, ಜನರನ್ನು ಅರೆಸ್ಟ್ ಮಾಡಿದ್ದಾರೆ ಇಷ್ಟಾದರೂ ಕೂಡ ಮಾಡಿಲ್ಲ ಅಂತ ಸಚಿವರು ಈ ರೀತಿ ಉತ್ತರ ಕೊಡುವುದಾದರೆ ಏಕೆ ನಾವು ಕುಳಿತುಕೊಳ್ಳಬೇಕು. ಅಸತ್ಯ ಎಂದರೆ ಸಿಟ್ಟು ಬರುತ್ತದೆ. ಇದು ಸತ್ಯಕ್ಕೆ ದೂರವಲ್ಲವೇ ?

(ಗೊಂದಲ)

ಶ್ರೀ ಬಿ. ರಾಚಯ್ಯ.—ಅಲ್ಲ ಸ್ವಾಮಿ, ಅದನ್ನು ಸೀಜ್ ಮಾಡಿದಮೇಲೆ ಮುಂದೆ ಅವರೇ ಕೇಸನ್ನು ತೆಗೆದುಕೊಳ್ಳಿ ಎಂದು ಹೇಳಿದಮೇಲೆ, ನಿಮ್ಮ ಕೇಸನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ ಎನ್ನುವ ದಾಖಲೆ ಕೂಡ ಇಟ್ಟು ಕೊಳ್ಳಲಿಲ್ಲ. ಅಷ್ಟೇ ನನಗೆ ಬಂದಿದ್ದು. ಕಸ್ಟಮ್ಸ್ ಬಂದರು, ಬಿಟ್ಟುಬಿಟ್ಟರು. ಈಗ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಹಿಡಿಯುತ್ತಾರೆ. ಒಬ್ಬ ಇನ್ಸ್‌ಪೆಕ್ಟರ್ ಬಂದರು ಅಂತ ಬಿಟ್ಟುಬಿಟ್ಟರೆ ಅವನ ಕರ್ತವ್ಯ ಮುಗಿದುಹೋಯಿತೇ, ? ಹಾಗಿದೆ ಇದು ಅದಕೋಸ್ಕರ...

ಶ್ರೀ ಎಂ. ವೀರಪ್ಪಮೊಯ್ಲಿ.—ಜಪ್ತಿ ಮಾಡಿದ್ದಾರೆ, ೧೫ ಲಕ್ಷದ ವಸ್ತುಗಳನ್ನು ಸೀಸ್ ಮಾಡಿದ್ದಾರೆ. ೪೦ ಆರಮ್ಡ್ ಗನ್ಸ್‌ಗಳನ್ನು ಸೀಸ್ ಮಾಡಿದ್ದಾರೆ. ಟ್ರಕ್ ಸೀಜ್ ಮಾಡಿದ್ದಾರೆ. ಹಾಗಾದರೆ ತಮ್ಮ ಹೇಳಿಕೆಗೆ ಒಂದು ನಯಾಪೈಸೆಯಷ್ಟು ಸಹ ಬೆಲೆ ಇಲ್ಲವೇ ?

(ಗೊಂದಲ)

ಅಧ್ಯಕ್ಷರು.—ತಾವು ದಯವಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ. ರಾಚಯ್ಯ.—ಇಬ್ಬರೂ ದಯವಾಡಿ ಕುಳಿತುಕೊಳ್ಳಿ, ಇಲ್ಲಿ ಬಂದಿರುವಂತಾಹದ್ದು ಏನು ಎಂದರೆ ಅಂಹ ಒಳ್ಳೆಯ ಕೆಲಸ ಮಾಡಿರುವುದಕ್ಕೆ ತಕ್ಷಣ ವರ್ಗ ಮಾಡಿದ್ದಾರೆ ಎನ್ನುವುದು.

(ಗೊಂದಲ)

ಶ್ರೀ ಕೆ. ಅಮರನಾಥರೆಟ್ಟಿ.—ಅಧ್ಯಕ್ಷರೆ.....

ಅಧ್ಯಕ್ಷರು.—ದಯವಿಟ್ಟು ಶೆಟ್ಟರೆ ತಾವು ಕುಳಿತುಕೊಳ್ಳಿ, ಅವರು ಹೇಳುವುದನ್ನು ಮುಂಗಿಸಲಿ.....

(ಗೊಂದಲ)

ಶ್ರೀ ಬಿ. ರಾಚಯ್ಯ.—ನನಗೆ ಈ ಕಡೆಯವರಾಗಲೀ, ಆ ಕಡೆಯವರಾಗಲೀ, ಇಬ್ಬರ ಇಂಟರೆಸ್ಟ್ ಏನೆಂದರೆ, ಈ ಸರ್ಕಾರದಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳು ಪ್ರಾಮಾಣಿಕವಾಗಿ ಇದ್ದರೆ ಅವರು ಒಳ್ಳೆಯ ಕೆಲಸ ಮಾಡಿದರೆ, ಅವರಿಗೆ ಬೆನ್ನು ತಟ್ಟುವುದಕ್ಕೆ ಬದಲಾಗಿ ಈ ಶಿಕ್ಷೆ ಬಂತಲ್ಲ ಎನ್ನುವ ಆತಂಕವನ್ನು ಅವರು ವ್ಯಕ್ತಪಡಿಸಿದ್ದಾರೆ. ಬಹುಶಃ ನನಗೆ ಬಂದಿರತಕ್ಕ ಸಂಶಯವನ್ನು ತಮ್ಮ

ಮುಂದೆ ಇಟ್ಟಿದ್ದೇನೆ ಆದುದರಿಂದ ನಿಜಾಂಶವನ್ನು ಮತ್ತೆ ನಾನು ವಿಚಾರಣೆ ಮಾಡಿ ಅವರು ನಿಜವಾಗಿಯೂ ಕೂಡ ಏಕೆ ಬಿಟ್ಟು ಹೋದರು, ಮತ್ತು ಏಕೆ ಕೇಸ್ ಹಾಕಲಿಲ್ಲ ಎನ್ನುವುದನ್ನು ಕಂಡುಹಿಡಿದು, ನಿಜವಾಗಿಯೂ ಒಳ್ಳೆಯ ಕೆಲಸ ಮಾಡಿದವರಿಗೆ ಬೆನ್ನು ತಟ್ಟುವ ಉದ್ದೇಶದಿಂದಲೇ ಇದನ್ನು ಹೇಳಿದ್ದೇನೆ. ಆದ್ದರಿಂದ ಇವತ್ತು ದಯವಿಟ್ಟು ಪೊಯ್ಲಿಯವರು ತಪ್ಪು ತಿಳಿದುಕೊಳ್ಳಬಾರದು. ಇದರಲ್ಲಿ ಕೆಡುಕು ಮಾಡುವ ಉದ್ದೇಶ ಇಲ್ಲ, ನಿಜವಾಗಿಯೂ ನಾನು ಒಳ್ಳೆಯ ಅಧಿಕಾರಿಗಳಿಗೆ ಬೆನ್ನು ತಟ್ಟುವ ಆಸೆ ಇದೆ. ಆದರೆ ಅವರೆ ನಾದರೂ ಈ ವಾಧ್ಯದಲ್ಲಿ ಹಿಡಿದು ಬೇರೆ ರೀತಿಯಲ್ಲಿ ಏನಾದರೂ ಮಾಡಿದ್ದರೆ ಅದನ್ನು ನಿಮ್ಮ ಮುಂದೆ ತರುತ್ತೇನೆ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕಂಳಿತುಕೊಳ್ಳಬೇಕು. ಎಲ್ಲಾ ಮುಗಿದಿದೆ. ಕಾಲಿಂಗ್ ಅಟೆನ್‌ಷನ್ ಹಾಕಿದ್ದಾರೆ. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ನಿಂತಿದ್ದಾರೆ, ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ, ಇದು ಸರಿಯಲ್ಲ. ಡಿಮ್ಯಾಂಡ್ ಮೇಲೆ ಅವಕಾಶ ಕೊಡುತ್ತೇನೆ. ಅಲ್ಲಿಯವರೆಗೂ ಕುಳಿತುಕೊಳ್ಳಿ.

(ಗೊಂದಲ)

ಮುಖ್ಯಮಂತ್ರಿಯವರ ಹೇಳಿಕೆ

ತಾಲ್ಲೂಕು ಅಭಿವೃದ್ಧಿ ಸಮಿತಿಗಳ ರಚನೆ ಬಗ್ಗೆ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಾಲ್ಲೂಕಾ ಅಭಿವೃದ್ಧಿ ಕಮಿಟಿಗಳ ವಿಚಾರದಲ್ಲಿ ಹೇಳುತ್ತೇನೆ. ಇದರ ಬಗ್ಗೆ ಮೇಲ್ಮನೆಯಲ್ಲೂ ಚರ್ಚೆಯಾಯಿತು ಇಲ್ಲೂ ಚರ್ಚೆಯಾಯಿತು. ತಾವೇ ವಿರೋಧಪಕ್ಷದ ನಾಯಕರು ಮತ್ತು ಇನ್ನೂ ಇತರ ಸದಸ್ಯರನ್ನೂ ಮತ್ತು ಈ ಕಡೆ ಇರತಕ್ಕಂಥಾ ನಮ್ಮ ಪಕ್ಷದ ಕೆಲವು ಸದಸ್ಯರನ್ನೂ ಕರೆದು ವಿಚಾರ ವಿನಿಮಯ ಮಾಡಿದೆವು. ಅಲ್ಲಿ ತೀರ್ಮಾನವಾದಂತೆ ಇಲ್ಲಿಗೆ ಬಂದು ಈ ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ ಈ ತಾಲ್ಲೂಕು ಕಮಿಟಿಗಳನ್ನು ರಚಿಸಿರತಕ್ಕಂಥ ಅವಶ್ಯಕತೆ ಬಹಳ ದಿವಸಗಳಿಂದಲೂ ಇತ್ತು. ಜಿಲ್ಲಾಪರಿಷತ್ತಿನ ಮಸೂದೆಗೆ ಕೇಂದ್ರ ಸರ್ಕಾರದ ಅಸ್ತು ಸಿಗದೇ ಇದ್ದ ಕಾರಣಕ್ಕಾಗಿ ಅದು ಆಯಿತು. ಇಲ್ಲಿ ಇದು ಪಾಸಾಗಿ ಬಹಳ ದಿವಸ ಆಗಿತ್ತು. ಸುಮಾರು ೮–೯ ತಿಂಗಳಾದಮೇಲೆ ತಾಲ್ಲೂಕ್ ಲೆವಲ್‌ನಲ್ಲಿ ಅಭಿವೃದ್ಧಿಯ ಕೆಲಸಗಳನ್ನು ತೆಗೆದುಕೊಂಡು ನಡೆಸುವುದಕ್ಕೆ ಅಧಿಕಾರೇತರ ಒಂದು ಸಮಿತಿ ಮಾಡುವುದು ಅಗತ್ಯ ಇತ್ತು. ಈ ತಾಲ್ಲೂಕ್ ಬೋರ್ಡ್ ಕಮಿಟಿಯ ರಚನೆ ಬಹುಶಃ ಜೂನ್ ತಿಂಗಳಿನಲ್ಲಿ ಆಯಿತು ಎಂದು ಕಾಣುತ್ತದೆ. ಸುಮಾರು ೬೫ ತಾಲ್ಲೂಕು ಕಮಿಟಿಗಳು ಆಗಿವೆ. ಅಷ್ಟರಲ್ಲೇ ಈ ಜಿಲ್ಲಾ ಪರಿಷತ್ ಮಸೂದೆಗೆ ರಾಷ್ಟ್ರಾಧ್ಯಕ್ಷರ ಅಂಕಿತ ಬಿತ್ತು. ಇದು ಈಗ ನಮ್ಮ ಹತ್ತಿರ ಬಂದಿದೆ. ಈ ಮಸೂದೆ ಕಾಯಿದೆ ಆಗಿರುವುದರಿಂದ ಅದಷ್ಟು ಬೇಗನೆ ಈ ಜಿಲ್ಲಾ ಪರಿಷತ್ತಿನ ಚುನಾವಣೆಯನ್ನು ನಡೆಸತಕ್ಕಂಥಾ ಉದ್ದೇಶ ಸರ್ಕಾರಕ್ಕೆ ಇರುವುದರಿಂದ ತಾಲ್ಲೂಕಾ ಅಭಿವೃದ್ಧಿ ಕಮಿಟಿಗಳ ರಚನೆಯು ಅಗತ್ಯ ಈಗ ಇಲ್ಲ ಎಂದು ಹೇಳುವುದು ನನ್ನ ಅಭಿಪ್ರಾಯವಾಗಿವೆ. ಆದುದರಿಂದ ಇನ್ನು ಮುಂದೆ ತಾಲ್ಲೂಕು ಅಭಿವೃದ್ಧಿ ಕಮಿಟಿಗಳನ್ನು ಸರ್ಕಾರ ರಚನೆ ಮಾಡುವುದಿಲ್ಲ. ಈಗ ರಚನೆ ಆದಂಥ ತಾಲ್ಲೂಕು ಅಭಿವೃದ್ಧಿ ಕಮಿಟಿಗಳಿಗೆ ಅಸಿಸ್ಟೆಂಟ್ ಕಮೀಷನರು ಅಧ್ಯಕ್ಷರು. ನಮ್ಮ ಚುನಾವಣೆ ಕಾಯಿದೆಯಂತೆ ಅಸಿಸ್ಟೆಂಟ್ ಕಮೀಷನರ್ ರಿಟರ್ನಿಂಗ್ ಆಫೀಸರ್ ಆಗುತ್ತಾರೆ. ಅವರೇ ರಿಟರ್ನಿಂಗ್ ಆಫೀಸರ್ ಆಗಿರುವುದರಿಂದ ಅವರೇ ಯಾವ ದಿವಸ ಅನ್ನುವುದನ್ನು ಹೊರಡಿಸಬೇಕಾಗುತ್ತದೆ. ಆ ದಿವಸದಿಂದ ಅವರು ಅದರ ಅಧ್ಯಕ್ಷತೆಯನ್ನು ವಹಿಸಿ ಕಮಿಟಿಯ ಮೀಟಿಂಗ್ ಅನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆವಾಗ ತನ್ನಷ್ಟಕ್ಕೆ ತಾನೇ ಕೆಲವೇ ದಿವಸದಲ್ಲಿ ಈಗ ರಚಿತವಾಗಿರತಕ್ಕಂಥ ಕಮಿಟಿಗಳೂ ಕೂಡ ನಿಷ್ಕ್ರಿಯವಾಗುತ್ತದೆ. ಈ ವಿಚಾರವನ್ನು ಈ ಮನೆಯ ಸದಸ್ಯರ ಗಮನಕ್ಕೆ ತಂದಿರುವುದರಿಂದ ಅವರು ಹೇಳಿದ್ದು ಬಯಸಿದಂತಾಗುತ್ತದೆ ಹಾಗೂ ಈ ಹೇಳಿಕೆಯಿಂದ ಎಲ್ಲರಿಗೂ. ಸಹ ಸವಾಧಾನವಾಗುತ್ತದೆ ಎಂದು ನಾನು ಆಶೆ ಮಾಡುತ್ತೇನೆ.